Approved by the Department of Public Instruction

ಕರ್ನಾಟಕ ಸ್ಕೌಟ್ ಮತ್ತು ಗೈಡ್

The Karnataka Scout and Guide

ಸಂಪುಟ : 81 ಮಾರ್ಚ್ 1998 ಸಂಚಿಕೆ : 12

ಸ್ವಾತಂತ್ರ್ಯ ಸ್ವರ್ಣ
ಮಹೋತ್ಸವ ವರ್ಷ

ಮಾಜಿ ಮುಖ್ಯಮಂತ್ರಿ ಹಾಗೂ ಮಾಜಿ ಅಧ್ಯಕ್ಷರು, ರಾಜ್ಯ ಸಂಸ್ಥೆ ಶ್ರೀ ಎಸ್. ನಿಜಲಿಂಗಪ್ಪನವರನ್ನು
ಶ್ರೀ ಇಟಗಿ ಕೊಟ್ರೇಶ್, ಸ್ಕೌಟ್ ಮಾಸ್ಟರ್ ಹಾಗೂ ಸ್ಕೌಟ್‌ಗಳು, ಸ್ವಾಮಿ ವಿವೇಕಾನಂದ
ಸ್ಕೌಟ್ ಯೂನಿಟ್, ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜು, ಚಿತ್ರದುರ್ಗ
ಇವರು 24-3-1998 ರಂದು ಸಂದರ್ಶಿಸಿದರು.

The Karnataka Scout and Guide

March 1998

Vol. 81 No. 12

Editor :

Prof. M. SURYANARAYANAPPA

Associate Editor :

Sri R. CHANDRASEKHARAN

Members :

Sri C. S. REDDY
Smt. P. SAROJA
Sri K. THIMMAPPA
Smt. N. H. KAMALAKSHAMMA
Sri NARAYANA SETTY
Sri S. PAUL RAJ
Sri N. SRINIVASAN
Sri M. G. HEGDE HALASIGE

CONTENTS

1. ರಾಜ್ಯ ಮುಖ್ಯ ಆಯುಕ್ತರಿಂದ 1
2. ಅಂತರರಾಷ್ಟ್ರೀಯ ಘಟನೆಗಳು 2
3. ಹಳೇ ಬೇರು ಹೊಸ ಚಿಗುರು 3
4. Rajyapuraskar Scouts and Guides Awards 1998 6
5. ಅಲ್ಲಲ್ಲಿ ಏನೇನು ? 7
6. ಕಾಡಿನ ವಾತಾವರಣ ಮತ್ತು ಮರಿಗಳ ಶಿಕ್ಷಣ 11
7. ಖುರ್ದಾ ಜಾಂಬೋರಿಯಲ್ಲಿ ಒಬ್ಬ ಗೈಡಳ ಅನುಭವಗಳು 14
8. Declaration Form iv 17
9. ಲಕ್ಷ್ಮಿ ಪ್ರಶಸ್ತಿ 18
10. Cheerfulness & good Temper III Cover

THOUGHT FOR THE MONTH

"Courage, Cheerfulness and Love
make good men"

–Sir William Osler

ಸ್ಥೈರ್ಯ, ಗೆಲುವು ಮತ್ತು ಪ್ರೇಮಮಯವಾಗಿರುವುದು
ಸಭ್ಯರನ್ನಾಗಿಸುತ್ತದೆ.

-ಸರ್ ವಿಲಿಯಂ ಆಸ್ಲರ್

ಕೊಂಡಜ್ಜಿ ಬ. ಷಣ್ಮುಖಪ್ಪ

ರಾಜ್ಯ ಮುಖ್ಯ ಆಯುಕ್ತರು

ಆತ್ಮೀಯ ಬಂಧುಗಳೇ,

ಮಾರ್ಚ್ 1998ರ ಸಂಚಿಕೆ ಒರಿಸ್ಸಾದ ಖುರ್ದಾದಲ್ಲಿ ನಡೆದ 13ನೇ ರಾಷ್ಟ್ರೀಯ ಜಾಂಬೋರಿ ವರದಿಯೊಂದಿಗೆ ನಿಮ್ಮ ಕೈ ಸೇರುತ್ತಿದೆ. ಈ ಸಂಚಿಕೆ ಓದಿದ ನಿಮಗೆ ಮಿಂಚಿನ ಸಂಚಾರವಾಗಲಿದೆ. ಈ ಕಾಯಕವೆ ಕೈಲಾಸವೆಂಬುದನ್ನು ಆಚರಣೆ ಮಾಡುತ್ತ ಬಂದಿರುವ ರಾಷ್ಟ್ರ ನಾಯಕ ಶ್ರೀ ನಿಜಲಿಂಗಪ್ಪನವರ ಸಂದರ್ಶನ ಲೇಖನ. ಅವರ ಜೀವನದ ಹಲವು ಮುಖಗಳನ್ನು ನಾವಿಲ್ಲಿ ನೋಡುತ್ತೇವೆ ಅವರ ಆದರ್ಶದ ಬದುಕು ಸತ್ಯಕ್ಕೆ ಸಾವಿಲ್ಲ ಎಂಬ ಚಿಂತನೆ ಅವರು ನಮಗೆ ನೀಡಿದ ಪ್ರೋತ್ಸಾಯದಾಯಕ ಹಿತನುಡಿ ಸಮಾಜ ಸೇವೆ ಮಾಡುವ ಮನಸ್ಸಿದ್ದವರಿಗೆ ಮಾರ್ಗದರ್ಶನ. ಅವರು ಇನ್ನೂ ಬಹುಕಾಲ ಬದುಕಿ ನಮಗೆ ಮಾರ್ಗದರ್ಶನದ ಚೇತನವಾಗಲಿ ಎಂದು ಹಾರೈಸೋಣ.

ಸ್ಕೌಟ್ಸ್ ಮತ್ತು ಗೈಡ್‌ಗಳು ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಹಲವು ಪ್ರಶಸ್ತಿಗಳನ್ನು ತಮ್ಮದಾಗಿಸಿ ಕೊಂಡಿರುವುದು ನಮ್ಮೆಲ್ಲರ ಶ್ರಮದ ದ್ಯೋತಕ ಹಾಗೂ ಹೆಮ್ಮೆಯ ಸಂಗತಿ. ಇಷ್ಟಕ್ಕೆ ನಾವು ತೃಪ್ತರಾಗದೆ ನಮ್ಮ ಚಟುವಟಿಕೆಗಳನ್ನು ಚುರುಕುಗೊಳಿಸುವುದು ಅಷ್ಟೇ ಅಗತ್ಯ ಈ ದಿಶೆಯಲ್ಲಿ ಕಾರ್ಯೋನ್ಮುಖರಾಗಲು ನಾವೆಲ್ಲ ಪಣ ತೊಡಬೇಕು. ಅಂದಾಗ ಮಾತ್ರ ಸಂಸ್ಥೆಯ ಧ್ಯೇಯೋದ್ದೇಶ ಸಫಲವಾಗುವುದು.

ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಈ ವರ್ಷದಲ್ಲಿ ಹಮ್ಮಿಕೊಂಡಿರುವ ವಿವಿಧ ಚಟುವಟಿಕೆಗಳು ನಿರಂತರವಾಗಿ ನಡೆಯಬೇಕಾಗಿದೆ. ಜಿಲ್ಲಾ ಮಟ್ಟದಲ್ಲಿಯ ಚಟುವಟಿಕೆಗಳು ಕೆಲವೆಡೆ ಇನ್ನೂ ಚುರುಕುಗೊಳ್ಳಬೇಕಾಗಿದೆ. ಯುವಕರಲ್ಲಿ ಜಾಗೃತಿ ಉಂಟು ಮಾಡುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು.

ಒರಿಸ್ಸಾದ ಖುರ್ದಾದಲ್ಲಿ ಜರುಗಿದ 13ನೇ ರಾಷ್ಟ್ರೀಯ ಜಾಂಬೂರಿಯ ಸುವರ್ಣ ಕ್ಷಣಗಳು ಯುವಕ, ಯುವತಿಯರಿಗೆ ಅದರಲ್ಲೂ ನಮ್ಮ ಸ್ಕೌಟ್ಸ್ ಮತ್ತು ಗೈಡ್ಸ್ ಸದಸ್ಯರಿಗೆ ಚೇತೋಹಾರಿ ಎನ್ನುವುದರಲ್ಲಿ ಸಂಶಯವಿಲ್ಲ ಇಂತಹ ಚಟುವಟಿಕೆಯಲ್ಲಿ ಭಾಗವಹಿಸಿದಾಗ, ತಮ್ಮ ಅನುಭವಗಳನ್ನು ಹಂಚಿಕೊಂಡಾಗ ಇತರರಿಗೂ ಅದು ಚೇತೋಹಾರಿ ಹಾಗೂ ಪ್ರೋತ್ಸಾಹದಾಯಕ ಅದ್ದರಿಂದ ನಮ್ಮ ಸ್ಕೌಟ್ ಮತ್ತು ಗೈಡ್ ವಿದ್ಯಾರ್ಥಿ ಮಿತ್ರರು ತಮ್ಮ ಅನುಭವಗಳನ್ನು ಬರೆದು ಹಂಚಿ ಕೊಳ್ಳುವ ಪ್ರವೃತ್ತಿ ಹೆಚ್ಚು ಹೆಚ್ಚು ಬೆಳೆಸಿಕೊಳ್ಳಬೇಕು.

ಒಟ್ಟನಲ್ಲಿ ಈ ಸಂಚಿಕೆಯ ಲೇಖನ ಹಾಗೂ ಕಾರ್ಯಕ್ರಮಗಳ ಸುದ್ದಿ ಪ್ರೋತ್ಸಾಹದಾಯಕವಾಗಿದೆ. ಮುಂಬರುವ ದಿನಗಳಲ್ಲಿ ರಾಷ್ಟ್ರೀಯ ಅಂತರರಾಷ್ಟ್ರೀಯ ಮಟ್ಟದ ಚಟುವಟಿಕೆಗಳನ್ನು ಗಮನಿಸುತ್ತಾ ನಾವೂ ಅವರ ಸರಿಸಮನಾದ ಉಪಯುಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮುನ್ನಡೆಯಲು ಶಕ್ತರಾಗೋಣ.

ತಮ್ಮ ವಿಶ್ವಾಸಿ,

ಕೊ.ಬ.ಷಣ್ಮುಖಪ್ಪ

ಅಂತರ ರಾಷ್ಟ್ರೀಯ ಘಟನೆಗಳು

ಜೂನ್ 18-4 ಜುಲೈ	"ಅರಣ್ಯ ವಿಶೇಷ" ರಾಷ್ಟ್ರೀಯ ಸೇವಾ ಶಿಬಿರ	ಜಕಾರ್ತಾ, ಇಂಡೋನೇಷಿಯ
ಜುಲೈ 4-11	ರಾಷ್ಟ್ರೀಯ ಜಾಂಬೋರೀ	ನಾರ್ವೆ
18-25	ಗೈಡುಗಳ CYMRU ಅಂತರರಾಷ್ಟ್ರೀಯ ಶಿಬಿರ	ಯು. ಕೆ.
19-24	ಎ. ಪಿ. ಪ್ರಾದೇಶಿಕ ಲೀಡರ್ ಟ್ರೈನರ್‌ಗಳ ಶಿಬಿರ	ಹಾಂಕಾಂಗ್
22-24	ಎ. ಪಿ. ಪ್ರಾದೇಶಿಕ ಯುವ ವೇದಿಕೆ	,,
26-31	17ನೇ ಎ. ಪಿ. ಪ್ರಾದೇಶಿಕ ಸ್ಕೌಟ್ ಸಮಾವೇಶ	,,
ಜುಲೈ 25-1 ಆಗಸ್ಟ್	ಗೈಡ್ ಮತ್ತು ರೇಂಜರ್‌ಗಳಿಗಾಗಿ ರೆಡ್‌ರೋಸ್ ಕಿಂಡೆಜ್ವಸ್	ಯು. ಕೆ.
	ಕ್ಯಾಸಲ್ ಸೀಲಿಥ್	ಸ್ಕಾಟ್ಲೆಂಡ್ (ಯು.ಕೆ.)
ಜುಲೈ 28-10 ಆಗಸ್ಟ್	1998 ಆಹ್ವಾನ ಕಾರ್ಯಕ್ರಮ (ಬಾಯ್ ಸ್ಕೌಟ್ಸ್ ಆಫ್ ನಿಪ್ಪನ್)	ಟೋಕ್ಯೋ, ಜಪಾನ್
ಆಗಸ್ಟ್ 1-8	ಸ್ಟಾರ್ ಬರ್ಸ್ಟ್-98	ಸಸೆಕ್ಸ್ (ಯು.ಕೆ.)
	ರಾಕೆಟ್-98	ಡರ್‌ಹ್ಯಾಂ (ಯು.ಕೆ.)
	ಸಾಗರ ಸ್ಕೌಟ್ ಗೈಡುಗಳ ಶಿಬಿರ	ಫಿನ್ಲೆಂಡ್
	ವಿಂಗ್ಸ್-98	ಯು. ಕೆ.
	ಯೂನಿಟಿ-98	ಯು. ಕೆ.
ಆಗಸ್ಟ್ 3-7	12ನೇ ನಿಪ್ಪನ್ ಜಾಂಬೋರಿ-98	ಜಪಾನ್
2-9	20ನೇ ಎ. ಪಿ. ಮತ್ತು 8ನೇ ಚೈನಾ ರಾಷ್ಟ್ರೀಯ ಜಾಂಬೋರಿ	ತೈವಾನ್, ಚೈನಾ
17-25	8ನೇ ಫೀಜೀ ರಾಷ್ಟ್ರೀಯ ಜಾಂಬೋರಿ	ಫೀಜೀ
ಸೆಪ್ಟೆಂಬರ್ 5-12	ಕಾಮನ್ ವೆಲ್ತ್ ಶಿಬಿರ, 98	ಮಲೇಷಿಯ
98 ಡಿಸೆಂಬರ್ 27-6 ಜನವರಿ 99	19ನೇ ವಿಶ್ವ ಜಾಂಬೋರಿ	ಚಿಲಿ
,, 29-7 ,,	14ನೇ ಆಸ್ಟ್ರೇಲಿಯ ಮೂಟ್	ಆಸ್ಟ್ರೇಲಿಯ
99 ಜುಲೈ 19-22	7ನೇ ವಿಶ್ವ ಯುವ ವೇದಿಕೆ	ದ. ಆಫ್ರಿಕಾ

Laugh the World Laughs with you,
Weep, you weep alone

ನಗುತಿರು ನಗುತಿರು, ನೀ ನಗುತಿದ್ದರೆ
ನಾಡೇ ನಗುವುದು ನಿನ್ನೊಡನೆ
ಅಳುವೋ ಗೋಳದು, ಅಳುವವನೇ ಶನಿ,
ಯಾರೂ ಸೇರರು ಅವನೊಡನೆ.

—ದಿ॥ ಮು. ವೆಂಕಟಕೃಷ್ಣಪ್ಪ, ಶಿಡ್ಲಘಟ್ಟ

ಹಳೇ ಬೇರು - ಹೊಸ ಚಿಗುರು

ಶುದ್ಧ ರಾಜಕಾರಣ ಮಾಡಿದ ಭಾರತದ ಅಪರೂಪದ ರಾಜಕಾರಣಿಗಳಲ್ಲೊಬ್ಬರು, ಹಿರಿಯ ನೇತಾರರು, ಸ್ವಾತಂತ್ರ್ಯ ಹೋರಾಟಗಾರರು, ಅನುಭವಿ ರಾಜಕಾರಣಿಗಳು, ಮಾಜಿ ಮುಖ್ಯ ಮಂತ್ರಿಗಳು ಆದ ಶ್ರೀ ಎಸ್. ನಿಜಲಿಂಗಪ್ಪನವರು "ಶೀಲವೇ ಕುಲ, ನೀತಿಯೇ ಜಾತಿ" ಎಂದು ನಂಬಿದವರು ಈ ಧೀಮಂತ ರಾಜಕಾರಣಿಯನ್ನು ಆತ್ಮೀಯವಾಗಿ ಮಾತನಾಡಿಸಲೆಂದು, ವೃದ್ಧಾಪ್ಯಕ್ಕೆ ಯೌವ್ವನದ ನೆನಪುಗಳನ್ನು ತರಿಸಲೆಂದು ದಿನಾಂಕ 24-03-98ರ ಬೆಳಿಗ್ಗೆ 10-30ಕ್ಕೆ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ 20 ಸ್ಕೌಟ್‌ಗಳೊಂದಿಗೆ. ಸ್ಕೌಟ್ ಮಾಸ್ಟರ್ ಆದ ಶ್ರೀ ಇಟಗಿ ಕೊಟ್ರೇಶ್‌ರವರು ಶ್ರೀ ಎಸ್. ನಿಜಲಿಂಗಪ್ಪರವರನ್ನು ಭೇಟಿಯಾದರು. ವಾರ್ಷಿಕ ಪರೀಕ್ಷೆಗಳು ಮುಗಿದು ನಿರಾಳವಾಗಿದ್ದ ವಿದ್ಯಾರ್ಥಿಗಳು ಈ ಋಷಿ ಸದೃಶ ರಾಜಕಾರಣಿಯನ್ನು ಮಾತನಾಡಿಸಿದ್ದು. ಈಶ್ವರ ಸಂವತ್ಸರದ ಕೊನೆಯ ವಾರದಲ್ಲಿ—ಯುಗದ ಅಂತ್ಯದಲ್ಲಿ ಆ ಸ್ಮರಣೀಯ ಭೇಟಿಯು ಡಿ. ವಿ. ಜಿ. ಯವರ ಮಂಕು ತಿಮ್ಮನ ಕಗ್ಗದ ಸಾಲುಗಳನ್ನು ನೆನಪಿಗೆ ತಂದಿತು.

ಹೊಸ ಚಿಗುರು ಹಳೆಬೇರು ಕೂಡಿರಲು ಮರ ಸೊಬಗು
ಹೊಸಯುಕ್ತಿ ಹಳೆ ತತ್ವ ದೊಡಗೂಡೆ ಧರ್ಮ
ಋಷಿ ಕಾವ್ಯದೊಡನೆ ವಿಜ್ಞಾನ ಕಲಿ ಮೇಳವಿಸೆ
ಜಸವು ಜನ ಜೀವನಕ್ಕೆ ಮಂಕುತಿಮ್ಮ

ಮನೆ ಬಾಗಿಲಿಗೆ ಬಂದ ಸ್ಕೌಟ್‌ಗಳನ್ನು ಬಾಯ್ತುಂಬ ಕರೆದು ಬರಮಾಡಿಕೊಂಡು ಸತ್ಕರಿಸಿದರು. ಸ್ಕೌಟುಗಳು ಬಹು ಹತ್ತಿರದಿಂದ, ಅಂಗರಕ್ಷಕರಾರೂ ಇಲ್ಲದ ಮಾಜಿ ಮುಖ್ಯ ಮಂತ್ರಿಯವರನ್ನು ಅತ್ಯಂತ ಬೆರಗುಗಣ್ಣುಗಳಿಂದ ಪ್ರಶ್ನಿಸುತ್ತಲೇ ಹೋದರು............

1) ನೀವು ಹೇಗಿದ್ದೀರಿ ?

ನಾನು 96 ವರ್ಷದವನು. ಹೇಗಿರಬೇಕೋ ಹಾಗಿದ್ದೇನೆ. ಒಟ್ಟನಲ್ಲಿ ಆರೋಗ್ಯದಿಂದಿದ್ದೇನೆ.

2) ನಿಮ್ಮೂರು, ನಿಮ್ಮ ತಂದೆ, ತಾಯಿ, ಹೆಂಡತಿ ಮಕ್ಕಳು, ಮೊಮ್ಮಕ್ಕಳು ?

ಉದ್ದದ ಪ್ರಶ್ನೆಗೆ ತಾತ ನಗುಮೊಗದಿಂದಲೇ ವರದಿ ಒಪ್ಪಿಸಿದರು. ನಾನು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಹಲುವಾಗಲಿನಲ್ಲಿ 10-11-1902ರಲ್ಲಿ ಹುಟ್ಟಿದೆ. ನಮ್ಮ ಪೂರ್ವಿಕರು ಶ್ರೀಮಂತರಾದರೂ, ನನ್ನಪ್ಪನ ಕಾಲಕ್ಕೆ ಬಡತನದ ಬವಣೆ. ಆಡಿವಪ್ಪ—ನೀಲಮ್ಮ ಕಷ್ಟಜೀವಿಗಳ ಪುತ್ರ ನಾನು.

ನನ್ನ ಹೆಂಡತಿ "ಮುರಿಗಮ್ಮ" ದಾವಣಗೆರೆಯ ಬೆಳ್ಳೂಡಿ ಮನೆತನದವಳು, ನನಗೆ 9 ಜನ ಮಕ್ಕಳು. 6 ಜನ ಹೆಣ್ಣು, 3 ಜನ ಗಂಡು ಮಕ್ಕಳು. ಈಗಿನ ಹಾಗೆ ಇದ್ದಿದ್ದರೆ ನಾವು ಕುಟುಂಬ ಯೋಜನೆ ಅನುಸರಿಸುತ್ತಿದ್ದೆವು. ನನಗೆ 22 ಮೊಮ್ಮಕ್ಕಳಿದ್ದಾರೆ.

3) ನಿಮ್ಮ ಬಾಲ್ಯ ಜೀವನ, ಮತ್ತು ವಿದ್ಯಾಭ್ಯಾಸ ಹೇಗೆ ? ಎಲ್ಲಿ ನಡೆಯಿತು ?

ತಾತನದೋ, 96ರಲ್ಲೂ ಅರಳು-ಮರಳಾಗದ ಮನಸ್ಸು. ಗತಕಾಲದ ಸುಖದಾಯಕ ನೆನಪುಗಳು ಮುಖದ ಒಂದೊಂದು ನೆರಿಗೆಯಲ್ಲಿ ಮೂಡಿ ಬಾಯಲ್ಲಿ ನಿಧಾನವಾಗಿ ಹೊರಬಂದವು.

ನಮ್ಮ ಚಿಕ್ಕಪ್ಪನವರಿಗೆ ಮಕ್ಕಳಿರಲಿಲ್ಲ. ಅವರು ನನ್ನನ್ನು ದಾವಣಗೆರೆಗೆ ಕರೆತಂದು ಸಾಕಿದರು. ವಿದ್ಯಾಭ್ಯಾಸ ಮಾಡಿಸಿದರು. ನಾನು 12ನೇ ವರ್ಷದಲ್ಲಿ ಲೋಯರ್-ಸೆಕೆಂಡರಿ ಪಾಸ್ ಮಾಡಿದೆ. ಆಕಾಲದಲ್ಲಿ 1914-15ರಲ್ಲಿ ಲೋಯರ್-ಸೆಕೆಂಡರಿ ಸಾಮಾನ್ಯದ್ದಲ್ಲ ! ಜನ ಅತ್ಯಂತ ಗೌರವಾದರಗಳಿಂದ ನನ್ನನ್ನು ಕಾಣುತ್ತಿದ್ದರು. ಗೆಳೆಯರೊಡನೆ ಯಾವುದಾದರೂ ಸಭೆ ಸಮಾರಂಭಗಳಿಗೆ ಹೋದರೆ, ನನ್ನ ಸ್ನೇಹಿತರಿಗೆ ಬರೀ ಲಾಡು, ಆದರೆ ನನಗೆ ಮಾತ್ರ ಲಾಡು ಜೊತೆ ತೆಂಗಿನಕಾಯಿ (ಫಲ-ತಾಂಬೂಲ) ಕೊಡುತ್ತಿದ್ದರು.

ನಾನು ಓದಲು ಚಿತ್ರದುರ್ಗಕ್ಕೆ ಬಂದೆ ಎಂದು ಹೇಳಿದಾಗ,

ಆ ಬೊಚ್ಚು ಬಾಯಿ ಸಂತಸದ ನೆನಪುಗಳು ನಮ್ಮ ತರುಣರಿಗೆ ಮತ್ತಷ್ಟು ಸ್ಫೂರ್ತಿ ಕೊಟ್ಟವು.

4) ನೀವು ಸ್ಕೌಟಗೆ ಸೇರಿದ್ದಿರಾ ?

ತಾತನ ನೆನಪಿಗೆ ಮುಪ್ಪು ಬರುವುದೇ ಇಲ್ಲ. ನೆನಪಿನ ಪಾತ್ರೆಯ ತಳದಲ್ಲಿದ್ದುದನ್ನೆಲ್ಲಾ ಬಡಿಸಿದರು. ನಾನು ಚಿತ್ರದುರ್ಗದಲ್ಲಿ ಓದುತ್ತಿದ್ದಾಗ ಸ್ಕೌಟ್‌ಗೆ ಸೇರಿದ್ದೆ. ನಮ್ಮನ್ನು ತರಬೇತಿಗಾಗಿ ಜೋಗಿಮಟ್ಟಿಗೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ "ಪೇಪರ್ ಚೇಜಿಂಗ್" ಎನ್ನುವ ಆಟ ಆಡುತ್ತಿದ್ದೆವು. ಈ ಆಟ ತುಂಬಾ ಖುಷಿ ಕೊಡುತ್ತಿತ್ತು. ಎನ್ನುತ್ತಾ ಆಟದ ವಿವರಣೆಯನ್ನು ನೀಡಿದರು.

ನಂತರ ನಾನು ಸ್ಕೌಟನಲ್ಲಿ 1934ರಲ್ಲಿ ಸಹಾಯಕ ಜಿಲ್ಲಾ ಆಯುಕ್ತನಾಗಿ (ಎ. ಡಿ. ಸಿ.) ಕೆಲಸ ನಿರ್ವಹಿಸಿದ್ದೇನೆ. ಅದಲ್ಲದೆ ಚಿತ್ರದುರ್ಗದಲ್ಲೆ 1938ರಲ್ಲಿ ನಡೆದ ರಾಜ್ಯ ಸ್ಕೌಟ್ ರ್‍ಯಾಲಿಯಲ್ಲಿ ಕ್ವಾರ್ಟರ್ ಮಾಸ್ಟರ್ ಆಗಿದ್ದೆ ಮತ್ತು ಚಿತ್ರದುರ್ಗ ನಗರದಲ್ಲಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕಟ್ಟಡಕ್ಕೆ ಅಡಿಗಲ್ಲನ್ನು ಇಡಲು ದಿನಾಂಕ 10-8-1967ರಲ್ಲಿ ಬಂದಿದ್ದೆ. (ಆಗ ಮುಖ್ಯಮಂತ್ರಿಯಾಗಿದ್ದೆ) ಈ ಮಧ್ಯೆ ಬಹಳ ವರ್ಷ ಮುಖ್ಯಮಂತ್ರಿಯಾಗಿ ರಾಜ್ಯ ಸಮಿತಿ ಅಧ್ಯಕ್ಷನಾಗಿದ್ದೆ. ಇದೊಂದು ದೊಡ್ಡ ಯುವ ಸಂಘಟನೆ. ನೀವೆಲ್ಲರೂ ಚೆನ್ನಾಗಿ ಬೆಳೆಸಿಕೊಂಡು ಹೋಗಿರಿ ಎಂದರು.

5) ವಿದ್ಯಾರ್ಥಿ ಆಗಿದ್ದಾಗ, ಮುಂದೆ ಏನಾಗಬೇಕೆಂದು ನೀವು ಆಸೆ ಪಟ್ಟಿದ್ದಿರಿ ?

"ಗಾಂಧೀಜಿ" ವಿದ್ಯಾರ್ಥಿಗಳ ಪ್ರೇರಕರು, ನನಗೂ ಅವರಂತೆ ಲಾಯರ್ ಆಗಬೇಕು ಎಂದು ತುಂಬಾ ಆಸೆ ಆಯಿತು. ಪೂನಕ್ಕೆ ಹೋಗಿ ಲಾ ಓದಿದೆ. 26ನೇ ವಯಸ್ಸಿನಲ್ಲಿ ನನ್ನ ಲಾಯರ್ ಜೀವನವನ್ನು ಆರಂಭಿಸಿದೆ.

6) ನಿಮ್ಮ ರಾಜಕೀಯ ಪ್ರವೇಶ ಯಾವಾಗ ? ಏಕೆ ?

ತಾತ ನೆನಪುಗಳನ್ನೆಲ್ಲಾ ಕಲೆ ಹಾಕಿದರು ....

ತಾವು ಸ್ಟ್ರೈಕ್ ಮಾಡಿದ್ದ ಸಂದರ್ಭ ಒಂದನ್ನು ನೆನಪಿಸಿಕೊಂಡರು. ನಮ್ಮ ಕಾಲೇಜಿನಲ್ಲಿ ''ಬ್ರಜೇಂದ್ರನಾಥ್ ಸೀಲ್'' ಎಂಬ ಇಂಗ್ಲಿಷ್ ಪ್ರಾಧ್ಯಾಪಕರು ಒಮ್ಮೆ ನಮ್ಮನ್ನೆಲ್ಲಾ "ತಿಲಕಿಂಗ್ಸ್" ಎಂದು ವ್ಯಂಗ್ಯವಾಗಿ ಕರೆದಾಗ ಕೋಪಗೊಂಡ ನಾವು ತರಗತಿಗಳಿಗೆ ಬಹಿಷ್ಕಾರ ಹಾಕಿ ಸ್ಟ್ರೈಕ್ ಪ್ರಾರಂಭಿಸಿದೆವು. ಸೀಲ್ ಪ್ರಾಧ್ಯಾಪಕರು ಕ್ಷಮಾಪಣೆ ಕೋರಬೇಕೆಂದು ಪ್ರತಿಭಟಿಸಿದೆವು. ನಂತರ ಪ್ರಾಂಶುಪಾಲರು ನಮಗೂ, ತಿಳಿಯ ಹೇಳಿ ಸಮಾಧಾನಪಡಿಸಿದರು.

ನಾನು ಕಾಂಗ್ರೆಸ್‌ಗೆ ಸೇರಿದ್ದೆ. ಮುಖಂಡತ್ವ ವಹಿಸುತ್ತಿದ್ದೆ. ಅನೇಕಸಾರಿ ಹೋರಾಟದಲ್ಲಿ ಜೈಲಿಗೂ ಹೋಗಿ ಬಂದೆ. ನಮಗೆ ಸ್ವಾತಂತ್ರ್ಯ ಸಿಕ್ಕ ಮೇಲೆ ನಾನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನೂ ಆಗಿದ್ದೆ. ನಂತರ ಮೈಸೂರು ರಾಜ್ಯ ಪುನರ್ರಚನೆಯಾದ ಮೇಲೆ ನಾನು ಮುಖ್ಯಮಂತ್ರಿಯೂ ಆದೆ. ಮುಖ್ಯಮಂತ್ರಿಗಳ ನಂತರ ಅವರ 9 ಜನ ಮಕ್ಕಳಲ್ಲಿ ಯಾರೂ ರಾಜಕೀಯ ಪ್ರವೇಶ ಮಾಡಲಿಲ್ಲವೆಂಬುದು ಸೋಜಿಗವೇ ಸರಿ.

7) ಮುಖ್ಯಮಂತ್ರಿಯಾಗಿ ಕನ್ನಡ ಜನತೆಗೆ ನೀವು ನೀಡಿದ ಕೊಡುಗೆ ಏನು ?

ತಾತನಿಗೆ ತನ್ನ ಬಗ್ಗೆ ತಾನೇ ಹೇಳಿಕೊಳ್ಳಲಿಕ್ಕೆ ಮುಜುಗರ, ನೀವು ಈ ಬಗ್ಗೆ ನಿಮ್ಮ ಅಜ್ಜ ಅಜ್ಜಿಯರಿಂದ ಕೇಳಿ ತಿಳಿದುಕೊಳ್ಳಬೇಕು. ಆದರೂ ನಿಮ್ಮ ಸಂತೋಷಕ್ಕೆ ಹೇಳುತ್ತೇನೆ

1) ಅಂದು ಮೊದಲನೆಯದಾಗಿ ಹಿಂದೂಸ್ಥಾನದ ಸ್ವತಂತ್ರ ಹೋರಾಟಗಾರರಿಗೆ ಮತ್ತು 65 ವರ್ಷ ದಾಟಿದ ವಯೋವೃದ್ಧರಿಗಾಗಿ ಪಿಂಚಣಿ ಮಂಜೂರು ಮಾಡಿದೆ. ಅಂದಿನ ಸಂಗೀತಗಾರರಿಗೆ, ಕಲಾವಿದರಿಗೆ ಸಾಹಿತಿಗಳಿಗೆ ಪಿಂಚಣಿ ಮಂಜೂರು ಮಾಡಿದ್ದೆ. ಈ ರೀತಿ ಮಾಡಿದ್ದು ಮೊಟ್ಟ ಮೊದಲು ನನ್ನ ಸರ್ಕಾರ. ನಂತರ ಇತರ ರಾಜ್ಯದವರು ಕೇಂದ್ರದವರು ಈ ನೀತಿಯನ್ನು ಅನುಸರಿಸಿದರು.

2) ನಮ್ಮದು ಬಡದೇಶ. ಶ್ರೀಮಂತವಾಗಲು ಮೂರು ಮುಖ್ಯ ವಿಷಯಗಳ ಕಡೆ ನಾನು ಗಮನ ಕೊಟ್ಟೆ.

ನೀರಾವರಿ, ಅರಣ್ಯ ಮತ್ತು ವಿದ್ಯುತ್. ಆಗಲೇ 6 ಕೆರೆಗಳನ್ನು ಕಟ್ಟಿಸಿದೆ. 70 ಲಕ್ಷ ಎಕರೆಗೆ ನೀರಾವರಿ ಮಾಡಿಸಿದೆ (ಕಂಟ್ರ್ಯಾಕ್ಟರ್ ಎಸ್. ಕೆ. ಪಾಟೀಲ್, ಪಿ. ಆರ್. ರಾಮಯ್ಯನವರನ್ನು ನೆನೆಸಿದರು) ಶರಾವತಿಯಲ್ಲಿ ವಿದ್ಯುತ್ ತಯಾರಿಕೆ ಆರಂಭಿಸಿದೆವು. ಆಗ ಕೇವಲ ಒಂದು ತಿಂಗಳು ಸತತವಾಗಿ ವಿದ್ಯುತ್ ತಯಾರಿಸಿದರೆ ಅದು ಆರು ತಿಂಗಳಿಗೆ ಸಾಕಾಗುವಷ್ಟಾಗುತ್ತಿತ್ತು. ಉದ್ಘಾಟನೆಗೆಂದು ಬಂದಿದ್ದ ಅಂದಿನ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಮತ್ತು ಯು. ಎಸ್. ಎ. ಕೃಷಿ ಸಹಾಯಕರು ತುಂಬಾ ಸಂತಸ ವ್ಯಕ್ತಪಡಿಸಿದರು.

ತಾತನ ನೆನಪು ಹಿಂದಾಗುತ್ತಿತ್ತು : ನನಗೂ ನೆನಪಾಯ್ತು, ಕಗ್ಗದ ಸಾಲುಗಳು.

ಧರೆಯ ಬದುಕೇನದರ ಗುರಿಯೇನು ? ಫಲವೇನು ?
ಬರಿ ಬಳಸು ಬಡಿದಾಟ, ಬರಿ ಸಂಭ್ರಮಸೆ
ತಿರು ತಿರುಗಿ ಹೊಟ್ಟೆ ಹೊರಕೊಳ್ಳುವ ಮೃಗ ಖಗಕ್ಕಿಂತ
ನರನು ಸಾಧಿವುದೇನು ? ಮಂಕುತಿಮ್ಮ

ಇದೇ ಅಲ್ಲವೇ ನರನು ಸಾಧಿಸಬೇಕಾದುದು ಎಂದು ಅನ್ನಿಸಿತು.

8) ಸ್ಕೌಟ್‌ಗಳಿಗೆ ನಿಮ್ಮ ಹಿತವಚನ ?

ಸೇವಾ ಬುದ್ಧಿ, ಸಂಘಟಿತ ಶಕ್ತಿ, ಕರ್ಮದ ಗುಡಿ, ಶಿಸ್ತು ಬೆಳೆಸುವ ಸ್ಕೌಟುಗಳೇ

1) ನೀವು ಸುಳ್ಳು ಹೇಳಬಾರದು.

2) ಇತರರಿಗೆ ಸದಾ ಸಹಾಯ ಮಾಡಬೇಕು.

3) ನಿಮ್ಮ ಕಾಲಮೇಲೆ ನೀವು ನಿಲ್ಲಬೇಕು. ಮತ್ತೊಬ್ಬರ ಅಧೀನದಲ್ಲಿರಬಾರದು.

4) ನಿಮ್ಮ ಜಾತಿಯನ್ನು ಮನೆಯಲ್ಲಿ ಆಚರಿಸಿ. ಹೊರ ಬಂದ ಮೇಲೆ ನಾವೆಲ್ಲ ಒಂದೇ ಎಂದು ಒಗ್ಗಟ್ಟಾಗಿರಿ.

5) ತತ್‌ಕ್ಷಣ ಯಾವುದನ್ನೂ ನಂಬದಿರಿ. ಯೋಚಿಸಿ ಹೆಜ್ಜೆ ಇಡಿ.

6) ಇರುವುದರಲ್ಲಿಯೇ ಸ್ವಲ್ಪ ದಾನ ಮಾಡಿ.

ಕಾಯಕವೇ ಕೈಲಾಸ–ದಾಸೋಹವೇ ಶ್ರೇಷ್ಠ : ಎನ್ನುವ ಬಸವಣ್ಣನವರ ತತ್ವವನ್ನು ಅನುಸರಿಸಿರಿ.

(ಪುಟ 13 ರಲ್ಲಿ ಮುಂದುವರೆದಿದೆ)

Rajyapuraskar Scouts and Guides Awards - 1998

GET TOGETHER CAMP AT SHANTHI GRUHA AND RALLY AT RAJBHAVAN

The State Level 'Get Together' Camp was held at the 'Shanthi Gruha Camping Centre' in Bangalore on 7-2-1998. 138 Guides and 220 Scouts along with their 36 Scouters and 14 Guiders attended. These were representing the 809 Guides and 802 Scouts from the 23 Districts of the State, who were eligible to receive the awards during the year.

At the eventful function, held on the lush green lawns against the idyllic background of flowering trees shurbs and waterfalls of the Rajbhavan the Scouts and Guides participated in the awards presentation Ceremony. In the absence of His Excellency the Governor, Sri B. K. Bhattacharya, IAS., Principal Chief Secretary to Government of Karnataka presented the Awards. Sri K. B. Shanmukhappa, State Chief Commissioner welcomed. The Audience were appraised of the Achievements of Scouts & Guides before they become eligible for the Rajyapuraskar Award, the step before getting to the portals of Rashtrapathi Bhavan for receiving the Rashtrapathi Award at Delhi. Sri B. K. Bhattacharya in his blessings to children recalled his younger days when he had to trudge miles for schooling and so missed the opportunity to be a Scout. He said that his wife Mrs. Theresa Bhattacharya was a lucky person to be a Girl Guide in her younger days and she would be telling him about knotting. Camping, Cooking etc. He congratulated the Scouts and Guides and said that they were lucky to be Members of this World-wide Organisation and to have received quality Training to become happy, healthy and helpful citizens of our Great Country. Sri Chinnaswamy Reddy, Joint State Secretary, campered the programme. The Scouts and Guides gave a colourful display. The Governor was pleased to host Tea to participants. The Ceremony at Raj Bhavan was largely attended by office bearers of State and District Associations, Parents and well wishers and a host of invitees.

Prof. M. Suryanarayanappa State Secretary proposed a vote of thanks. The rally concluded with the singing of the National Anthem.

(Photos of this Awards function has appeared in Page 7 of the previous issue)

ಅಲ್ಲಲ್ಲಿ ಏನೇನು?

Bangalore North District

On 20-2-98 the R. T. C. Pry. School, St. Josephs Convent conducted investiture ceremony and presentation of badges. Smt. Lalitha Krishnaswamy. S. C. (G) was chief guest. They also had the Flying up Ceremony. Smt. Saroja SOC (G) was chief guest. Smt. Janaki Venugopal, STC (G) was guest of honour. They all sat through the ceremony. There was an exibition arranged on the occassion. Smt. B. Revathi ALT (B) supported the activities.

Bangalore South District

12th Annual Rally of Ulsoor Local Association was held on 24-1-98. 650 Scouts and Guides along with Scouters/Guiders participated Dr. K. V. Puranikmath, inaugurated competitions on various Scout Skills were held. Sri A. R. Infant, IPS was Chief Guest at Valedictiory function. Sjts Paloni, ADC and Lokesh, ASOC were present. Smt. Victoria welcomed and Sri Viswanath Kakade proposed vote of thanks.

Reported by : Viswanath Kakade

ಬೆಳಗಾಂ ಜಿಲ್ಲೆ

ಜಿಲ್ಲಾ ಪುರಸ್ಕಾರ ವಿತರಣಾ ಸಮಾರಂಭವು 10-2-98ರಂದು ಜರುಗಿತು. ಜಿಲ್ಲಾಧಿಕಾರಿಗಳಾದ ಶ್ರೀ ಜಿ. ವಿ. ಕೊಂಗವಾಡ್‌ರವರು 28 ಸ್ಕ್ಯಾಟ್‌ಗಳಿಗೆ ತೃತೀಯ ಸೋಪಾ೯ ಅನ್ನು 7 ಸ್ಕ್ಯಾಟ್‌ಗಳಿಗೆ ರಾಜ್ಯ ಪುರಸ್ಕಾರ್ ಇಬ್ಬರಿಗೆ ರಾಷ್ಟ್ರಪತಿ ಪ್ರಶಸ್ತಿಯನ್ನೂ ವಿತರಿಸಿದರು. ಇದೇ ಸಂದರ್ಭ ಇಮಾಮ್ ಹುಸೇನ್ ಎಂ. ಮುಲ್ಲಾ ಸ್ಮಾರಕ ಫಲಕವನ್ನು ಶ್ರೀಯುತರಾದ ಬಿ. ವೈ. ನಾಯಕ್ ಮತ್ತು ಎಸ್. ಎಸ್. ಬಳಿಗಾರ್‌ರವರಿಗೆ ನೀಡಲಾಯಿತು.

50ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ "ಶಾಂತಿ ಸಂದೇಶ" ಸೈಕಲ್ ಜಾಥದಲ್ಲಿ ಭಾಗವಹಿಸಿದ ರೋವರ್‌ಗಳಿಗೆ ಪ್ರಮಾಣಪತ್ರ ನೀಡಲಾಯಿತು.

350ಕ್ಕೂ ಹೆಚ್ಚು ಮಂದಿ ಸೇರಿದ್ದ ಈ ಯುವ ಮೇಳದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಲಾಯಿತು.

ಜಿಲ್ಲಾ ಮಟ್ಟದಲ್ಲಿ ಉತ್ತಮ ಮಟ್ಟದ ಸೇವೆ ಸಲ್ಲಿಸುವ ದಳಕ್ಕೆ ಜಿಲ್ಲಾಧಿಕಾರಿಗಳ ಸೇವಾ ಪರ್ಯಾಯ ಫಲಕವನ್ನು ಈ ವರ್ಷದಿಂದ ಸ್ಥಾಪಿಸಲಾಯಿತು.

22-2-98ರಂದು ಕೊಂಡಜ್ಜಿ ಬಸಪ್ಪ ಮುಕ್ತದಳದವರು ಜಿಲ್ಲಾ ಸ್ಕ್ಯಾಟ್ ಭವನದಲ್ಲಿ ಸಂಸ್ಥಾಪಕರ ದಿನ ಹಾಗೂ ಚಿಂತನಾ ದಿನಗಳನ್ನಾಚರಿಸಿ ಬೇಡನ್ ಪೋವೆಲ್ ದಂಪತಿಗಳನ್ನೂ ವಿಶ್ವಕ್ಕೆ ಅವರ ಕೊಡುಗೆಯನ್ನೂ ಸ್ಮರಿಸಿದರು.

ವರದಿ : ಟಿ. ಎ. ಮಂಜುನಾಥಾಚಾರ್

ಕೋಲಾರ ಉತ್ತರ ಜಿಲ್ಲೆ

28-2-98 ರಂದು ಕೋಲಾರದ ಸ್ಕೌಟ್ ಭವನದ ಆವರಣದಲ್ಲಿ ಸ್ವಾತಂತ್ರ್ಯ ಮಹೋತ್ಸವಾಚರಣೆ, ತಾಲ್ಲೂಕ್ ಸ್ಕೌಟ್ ಗೈಡ್ ಮೇಳ, ಸಂಸ್ಥಾಪಕರ ದಿನ ಹಾಗೂ ಚಿಂತನಾ ದಿನಗಳನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಬೃಹತ್ ಸ್ವಚ್ಛತಾ ಕಾರ್ಯಕ್ರಮ, ಪಥ ಸಂಚಲನೆ ಹಾಗೂ ಸರ್ವಧರ್ಮ ಪ್ರಾರ್ಥನೆಗಳನ್ನು ನಡೆಸಲಾಯಿತು. 500ಕ್ಕೂ ಹೆಚ್ಚು ಸ್ಕೌಟ್ ಗೈಡ್‌ಗಳು ಭಾಗವಹಿಸಿದ್ದರು. ವರ್ಣರಂಜಿತ ಸಾಂಸ್ಕೃತಿಕ ಕಾರ್ಯಕ್ರಮವೂ ಇದ್ದಿತು.

ಕೋಲಾರದಲ್ಲಿ 28-2-1998 ರಂದು ರಜತ ತಾರೆ ವಿಜೇತ ಶ್ರೀ ಎಸ್. ಪಾಲ್‌ರಾಜ್ ಅವರನ್ನು ಕೋಲಾರ ಜಿಲ್ಲಾಧಿಕಾರಿ ಶ್ರೀ ಮಹಮದ್ ಸನಾವುಲ್ಲರವರು ಸನ್ಮಾನಿಸುತ್ತಿರುವುದು. ಪ್ರೊ. ಎಂ. ಎಸ್. ಅಪ್ಪ ಮತ್ತು ಶ್ರೀ ಕೆ. ವಿ. ಶಂಕರಪ್ಪ ಇವರುಗಳು ಹಾಜರಿದ್ದರು

ರಾಷ್ಟ್ರಮಟ್ಟದ ಬೆಳ್ಳಿತಾರೆ ಪಡೆದ ಶ್ರೀ ಎಸ್. ಪಾಲ್‌ರಾಜ್, ಹಾಗೂ ಸಂಸ್ಥೆಗೆ ಅನುಪಮ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಜಾನಕಿ ವೇಣುಗೋಪಾಲ್, ವಯೋಲೆಟ್ ಕರೋಡಿ, ಗ್ಲೋರಿ ಕರೋಡಿ ಹಾಗೂ ಶ್ರೀ ಕೆ. ಪ್ರಹ್ಲಾದರಾವ್ ಇವರುಗಳನ್ನೂ ಸನ್ಮಾನಿಸಲಾಯಿತು.

ರಾಜ್ಯ ಕಾರ್ಯದರ್ಶಿ ಶ್ರೀ ಎಂ. ಸೂರ್ಯನಾರಾಯಣಪ್ಪನವರು ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಆಯುಕ್ತೆ ಶ್ರೀಮತಿ ಲಲಿತ ಕೃಷ್ಣಸ್ವಾಮಿ ಅಭಿನಂದನಾ ಭಾಷಣ ಮಾಡಿದರು.

ವರದಿ : ಶ್ರೀ ಓಮೇಶ್ವಯ್ಯ

ಬೆಂಗಳೂರು ಗ್ರಾಮಾಂತರ ಜಿಲ್ಲೆ

5-2-98ರಂದು ರಾಮನಗರಂ ತಾ|| ಅಕ್ಕೂರ್ ಪಂಚಾಯತ್‌ನ 'ಗೊಲ್ಲರಹಟ್ಟಿ' ಗ್ರಾಮದಲ್ಲಿ ಸಂಭವಿಸಿದ ಆಕಸ್ಮಿಕ ಬೆಂಕಿ ಅನಾಹುತದಲ್ಲಿ 28 ಗುಡಿಸಲುಗಳೂ, ಜಾನುವಾರೂ ಸಹ ಆಹುತಿಯಾದವು. ಈ ಸಂದರ್ಭದಲ್ಲಿ ರಾಮನಗರಂ ಸ್ಥಳೀಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಪದಾಧಿಕಾರಿಗಳು ದವಸ ಧಾನ್ಯ ಮತ್ತು ಉಡುವು ವಸ್ತ್ರಗಳನ್ನು ಸಂಗ್ರಹಿಸಿ (ರೂ. 15,000-ಕ್ಕೂ ಮೇಲ್ಪಟ್ಟು) ಸಂತ್ರಸ್ತರಿಗೆ ನೆರವು ನೀಡಿದರು.

ಹೊಸಕೋಟೆ ಸ್ಥಳೀಯ ಸಂಸ್ಥೆಯು 27-1-98 ರಂದು ಸೂಲಿಬೆಲೆ ಆರೋಗ್ಯ ಕೇಂದ್ರದಲ್ಲಿ ಕುಷ್ಠರೋಗ ನಿರ್ಮೂಲನಾ ಪ್ರಚಾರ' ಕಾರ್ಯಕ್ರಮವನ್ನು ಹಮ್ಮಿಕೊಂಡು, ತಿಳುವಳಿಕೆ ಫಲಕಗಳ ಸಮೇತ ಊರಿನ ಪ್ರಮುಖ

ದಿನಾಂಕ 5-2-1998 ರಂದು ರಾಮನಗರದ ಬಳಿ ಗೊಲ್ಲರಹಟ್ಟಿಯಲ್ಲಿ ಸಂಭವಿಸಿದ ಬೆಂಕಿ ಅನಾಹುತದಲ್ಲಿ ಎಲ್ಲವನ್ನೂ ಕಳೆದುಕೊಂಡ ಸಂತ್ರಸ್ತರಿಗೆ ಸ್ಥಳೀಯ ಸ್ಕೌಟ್ ಗೈಡ್ ಸಂಸ್ಥೆಯು ನೆರವು ನೀಡಿತು. ಚಿತ್ರದಲ್ಲಿ ಸಂತ್ರಸ್ತ ಕುಟುಂಬದವರ ಜೊತೆ ಸ್ಥ. ಸಂಸ್ಥೆ ಅಧ್ಯಕ್ಷ ಶ್ರೀ ಶೇಷಗಿರಿರಾವ್‌ರವರನ್ನೂ, ಶ್ರೀ ಪುಟ್ಟಸ್ವಾಮಿ, ಶ್ರೀ ಕೆ. ಪಿ. ಶಿವಪ್ಪ, ಶ್ರೀ ಬಸವರಾಜೇಗೌಡ, ಶ್ರೀ ಶ್ರೀನಿವಾಸಾಚಾರ್ ಶ್ರೀ ತಮ್ಮಯ್ಯ ಮತ್ತು ಶ್ರೀ ಸಿದ್ಧರಾಜು ಇವರುಗಳನ್ನೂ ಕಾಣಬಹುದು.

ರಸ್ತೆಗಳಲ್ಲಿ ಪಥಚಲನೆ ನಡೆಸಿದರು. ಡಾ|| ಅನಿಲ್‌ಕುಮಾರ್ ಮತ್ತು L.C. H.O.ರವರು ಕುಷ್ಠರೋಗದ ಬಗ್ಗೆ ಮಾಹಿತಿ ನೀಡಿದರು ಶ್ರೀ ಎನ್ ಮಲ್ಲೇಗೌಡರು ಅಧ್ಯಕ್ಷತೆ ವಹಿಸಿದ್ದರು.

ಹೊಸಕೋಟೆ ತಾ|| ಸೂಲಿಬೆಲೆ ಶ್ರೀ ವಿವೇಕಾನಂದ ಸ್ಕೌಟ್ ದಳದವರು ಮತ್ತು ಸ್ಥ. ಸಂಸ್ಥೆಯ ಇತರ ಸ್ಕೌಟ್‌ಗಳು 7-12-97 ರಿಂದ 18-1-98ರ ವರೆಗೆ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಸಕ್ರಿಯಪಾತ್ರವಹಿಸಿದರು.

ವರದಿ : ಶ್ರೀ ಜವರಯ್ಯ

ಚಿತ್ರದುರ್ಗ ಜಿಲ್ಲೆ

1-3-98ರಂದು, ಚಿತ್ರದುರ್ಗದ ಸೆಂಟ್ ಜೋಸೆಫ್ಸ್ ಶಾಲಾ ಆವರಣದಲ್ಲಿ 141ನೆಯ ಬಿ. ಪಿ. ಜನ್ಮದಿನ ಹಾಗೂ ಚಿಂತನಾದಿನ, ಒಂದು ದಿನದ ಹೊರ ಸಂಚಾರ ಹಾಗೂ ಆಧ್ಯಾತ್ಮಿಕ ಶಿಬಿರವನ್ನು ನಡೆಸಲಾಯಿತು. ಜಿಲ್ಲೆಯ ವಿವಿಧ ಭಾಗಗಳಿಂದ 300ಕ್ಕೂ ಮೇಲ್ಪಟ್ಟ ಸ್ಕೌಟ್ ಗೈಡ್‌ಗಳು ಭಾಗವಹಿಸಿದ್ದರು. ನ್ಯಾಯವಾದಿ ಶ್ರಿಪಾತ್ಯರಾಜನ್ ರಿಂದ ಉದ್ಘಾಟನೆ. ಶ್ರೀಯುತರುಗಳಾದ ಟಿ. ಚಂದ್ರಶೇಖರ್, ಮತ್ತು ಪಂಚಾಕ್ಷರಿ ಇವರುಗಳಿಂದ ಶಿಕ್ಷಣ, ಶ್ರೀಯುತರುಗಳಾದ ದೇವರಾಜಪ್ರಸಾದ್, ತಿಪ್ಪೇಸ್ವಾಮಿ, ಮತ್ತು ಶಿವಲಿಂಗಸ್ವಾಮಿ, ಶ್ರೀಮತಿ ಸೌಭಾಗ್ಯ, ಸಿ.|| ಲಿಯೋಟಿಡ್ ಮತ್ತು ಸಿ. ಮರಿಯ ಗೊರತ್ತಿ ಇವರುಗಳ ಮೇಲ್ವಿಚಾರಣೆ, ಮುರುಘಾಮಠದ ಶ್ರೀ ಸಿದ್ಧರಾಮ ಸ್ವಾಮಿಗಳಿಂದ ಆಧ್ಯಾತ್ಮಿಕ ಪ್ರವಚನ ನಡೆದುವು.

14-3-98ರಂದು ಸ್ವಾಮಿ ವಿವೇಕಾನಂದ ಸ್ಕೌಟ್ ದಳದವರು ಸಂಸ್ಥಾಪಕರ 141ನೆಯ ಜನ್ಮದಿವವನ್ನು ಆಚರಿಸಿದರು. ಸಾಮೂಹಿಕ ಪ್ರಾರ್ಥನೆಬಳಿಕ ಪ್ರಾಂಶುಪಾಲ ಶ್ರೀ ರುದ್ರಮುನಿ ಅವರು ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿ ರಾಜ್ಯ ಮುಖ್ಯ ಆಯುಕ್ತ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪನವರು ರಾಜ್ಯ ಆಯುಕ್ತೆ ಶ್ರೀಮತಿ ಲಲಿತ ಕೃಷ್ಣಸ್ವಾಮಿ, ರಾಜ್ಯ ಕಾರ್ಯದರ್ಶಿ ಶ್ರೀ ಎಂ. ಎಸ್. ಅಪ್ಪ ಮತ್ತು ಸ್ಥಳೀಯ ಪತ್ರಕರ್ತ ಶ್ರೀ ಜಿ. ಎಸ್. ಉಜ್ಜನಪ್ಪ ಆಗಮಿಸಿದ್ದರು. ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು, ರಾಜ್ಯ ಸಂಸ್ಥೆಯ ಪದಾಧಿಕಾರಿಗಳು, ವಿದ್ಯಾಲಯದ ಸಿಬ್ಬಂದಿ ವರ್ಗ ಆದಿಯಾಗಿ ಅನೇಕರು ಹಾಜರಿದ್ದರು. ಸ್ಕೌಟರ್ ಶ್ರೀ ಸೋಮಪ್ಪ ವಂದಿಸಿದರು. ಸ್ಕೌಟರ್ ಶ್ರೀ ಕೊಟ್ರೇಶ್ ಕಾರ್ಯಕ್ರಮ ನಿರೂಪಿಸಿದರು.

ದಕ್ಷಿಣ ಕನ್ನಡ ಜಿಲ್ಲೆ

10-1-98ರಿಂದ 12-1-1998ರವರೆಗೆ ಉಡುಪಿ ತಾ|| ಬಾರಕೂರಿನಲ್ಲಿ ಮರೆಯಲಾಗದ ಮೇಳ ನಡೆಯಿತು. 50ಕ್ಕೂ ಹೆಚ್ಚು ಸ್ಕೌಟ್ ಗೈಡ್‌ಗಳು ಭಾಗವಹಿಸಿದ್ದರು. ಸ|| ಜಿಲ್ಲಾ ಆಯುಕ್ತ ಶ್ರೀ ಮುರಳೀಧರ ಮೇಳ ನಿರ್ದೇಶಕರಾಗಿದ್ದರು. ಶ್ರೀ ವಿಯಲ್‌ರವರ ಅಧ್ಯಕ್ಷತೆಯಲ್ಲಿ ಫಾ|| ಡಿಸೋಜ ಉದ್ಘಾಟಿಸಿದರು. ಪಥಸಂಚಲನ, ಸ್ವಾತಂತ್ರ್ಯ ಸಂಗ್ರಾಮ ಸನ್ನಿವೇಶ ಪ್ರದರ್ಶನ, ರಾಷ್ಟ್ರೀಯ ಭಾವೈಕ್ಯ ಗೀತೆ, ಸಾಮೂಹಿಕಗಾನ, ಸ್ಕೌಟ್ ಗೈಡ್ ಕೌಶಲ್ಯಗಳು, ಚಿತ್ರ ರಚನೆ ಮುಂತಾದ ಸ್ಪರ್ಧೆಗಳು ನಡೆದುವು. ಸರ್ವ ಧರ್ಮ ಪ್ರಾರ್ಥನೆ ಮನಮಿಡಿಯಿತು. ರ್‍ಯಾಲಿ ಪತ್ರಿಕೆ, ರಸಪ್ರಶ್ನೆ ರಂಜಿಸಿದುವು. ಶ್ರೀ ಶಾಂತಾರಾಮಶೆಟ್ಟರವರ ಅಧ್ಯಕ್ಷತೆಯಲ್ಲಿ ಡಾ|| ಸೋಮಯಾಜಿ ಸಮಾರೋಪ ಭಾಷಣ ಮಾಡಿದರು. ಡಾ|| ನಾಗರತ್ನ ರಿಂದ ಪ್ರಮಾಣಪತ್ರ ವಿತರಣೆ, ಶ್ರೀ ಬಿ. ಸೀತಾರಾಂ ಶೆಟ್ಟರವರಿಂದ ಭವ್ಯಶಿಬಿರಾಗ್ನಿ ಸಾಂಸ್ಕೃತಿಕ ಕಾರ್ಯ ಕ್ರಮಗಳ ಸಂಯೋಜನೆ. ಸಂಸ್ಥೆಯ ಅಧ್ಯಕ್ಷ ಶ್ರೀ ರವೀಂದ್ರನಾಯಕ್‌ರವರಿಂದ, ಉಡುಪಿಯಿಂದ ಬಾರಕೂರ್‌ಗೆ ಉಚಿತ ಬಸ್ ವ್ಯವಸ್ಥೆ ಇವು ಮೇಳದ ಮಿಣುಕುಗಳು.

ವರದಿ : ಶ್ರೀ ವಾರಂಬಳ್ಳಿ

ಹಾಸನ ಜಿಲ್ಲೆ

22-2-98 ರಂದು ನಡೆದ 'ಸಂಸ್ಥಾಪಕರದಿನಾಚರಣೆ' ಯಲ್ಲಿ ಮೆಳಗೋಡು ಶ್ರೀ ನೇತಾಜಿ ಮುಕ್ತದಳದವರು ಸಕ್ರಿಯ ಪಾತ್ರವಹಿಸಿದರು.

ವರದಿ : ಶ್ರೀ ಮಂಜುನಾಥ್

ದಾವಣಗೆರೆ ಜಿಲ್ಲೆ

28-2-98ರಂದು "ಬಿ. ಪಿ. ಡೇ" ಆಚರಿಸಿ ಬಿ. ಪಿ. ದಂಪತಿಗಳನ್ನು ಸ್ಮರಿಸಲಾಯಿತು. 250ಕ್ಕೂ ಹೆಚ್ಚು ಸ್ಕೌಟ್ ಗೈಡ್‌ಗಳೂ, 16 ಸ್ಕೌಟರ್ ಗೈಡರ್‌ಗಳೂ ಸಂಸ್ಥೆಯ ಪದಾಧಿಕಾರಿಗಳೂ ಭಾಗವಹಿಸಿದ್ದರು. ಬಿ. ಪಿ. ಮತ್ತು ಲೇಡಿ ಬಿ. ಪಿ. ಭಾವ ಚಿತ್ರ ರಚನೆ ಸ್ಪರ್ಧೆ, ಶ್ರೀ ಕೆ. ಆರ್. ಸಿದ್ದಪ್ಪರವರಿಂದ ಲಾರ್ಡ್ ಮತ್ತು ಲೇಡಿ ಬಿ. ಪಿ.ರವರುಗಳ ಜೀವನ ಸಾಧನೆ, ಕೊಡುಗೆಗಳ ಬಗ್ಗೆ ಭಾಷಣ, ಶ್ರೀಮತಿ ವನಜಾಕ್ಷಮ್ಮನವರಿಂದ ಬಹುಮಾನ ವಿತರಣೆ, ಶ್ರೀಜಂಬಗಿಶರಣಪ್ಪ ನವರ ಅಧ್ಯಕ್ಷತೆ, ಶ್ರೀ ಪಾಂಡುರಂಗಪ್ಪರವರಿಂದ ಲಘು ಉಪಹಾರ, ಶ್ರೀಮತಿ ವನಜಾಕ್ಷಮ್ಮನವರಿಂದ ಸ್ವಾಗತ, ಶ್ರೀ ಎನ್. ಯಂ. ಗುರುಸ್ವಾಮಿರವರಿಂದ ವಂದನಾರ್ಪಣೆ ನಡೆದವು. ವಿಶ್ವ ಗೈಡ್ಸ್ ಮತ್ತು ಗರ್ಲ್ ಸ್ಕೌಟ್ ಸಂಸ್ಥೆಯ ಆಚರಣೆಗಾಗಿ, ಜಿಲ್ಲಾ ಸಂಸ್ಥೆಯ ಪರವಾಗಿ ರೂ. 350/ರ ದೇಣಿಗೆಯನ್ನು ಸಂಗ್ರಹಿಸಿ, ರಾಜ್ಯ ಸಂಸ್ಥೆಗೆ ಕಳುಹಿಸಿ ಕೊಡಲಾಯಿತು. ಸ್ಕೌಟರ್ ಶ್ರೀಮತಿ ಶಶಿರೇಖಾ ಕಾರ್ಯಕ್ರಮ ನಿರೂಪಿಸಿದರು.

ವರದಿ : ಶ್ರೀ ಗುರುಸ್ವಾಮಿ

ಶಿವಮೊಗ್ಗ ಜಿಲ್ಲೆ

27-28-2-98 ದಿನಗಳಂದು ಭದ್ರಾವತಿಯ ಸ್ಥಳೀಯ ಸಂಸ್ಥೆಯ ವತಿಯಿಂದ ತಾಲ್ಲೂಕು ಮಟ್ಟದ ಮೇಳ ನಡೆದು ಅಧಿಕ ಸಂಖ್ಯೆಯಲ್ಲಿ ಸ್ಕೌಟ್ ಗೈಡ್‌ಗಳು ಭಾಗವಹಿಸಿದ್ದರು.

ಕಾಡಿನ ವಾತಾವರಣ ಮತ್ತು ಮರಿಗಳ ಶಿಕ್ಷಣ

ಮರಿಗಳ ಶಿಕ್ಷಣದ ಮೂಲವಸ್ತುವಾಗಿ ಕಾಡಿನ ಕತೆಗಳ ಪ್ರಾಮುಖ್ಯತೆ

ಭಾವಾನುವಾದ : ರಾ. ಚಂದ್ರಶೇಖರನ್, (ಎಲ್.ಟಿ.)

(ಮುಂದುವರೆದುದು)

ಕಾಡಿನ ವ್ಯಕ್ತಿಗಳು :

ಕಾಡಿನ ಕತೆಗಳಲ್ಲಿ ಬರುವ ಎರಡನೆಯ ಸೂಚಕವೇ ಕಾಡಿನ ವ್ಯಕ್ತಿಗಳು. ಯೋಚಿಸಬಲ್ಲ, ಮಾತನಾಡಬಲ್ಲ ಮತ್ತು ಮನುಷ್ಯರೊಡನೆ ವ್ಯವಹರಿಸಬಲ್ಲ ಪ್ರಾಣಿಗಳು ಕಾಡಿನಲ್ಲಿ ವಾಸವಾಗಿರುವ ವಿಷಯವನ್ನು ಎರಡು ದೃಷ್ಟಿ ಕೋನಗಳಿಂದ ಪರಿಶೀಲಿಸಬೇಕಾಗುತ್ತದೆ.

ಮೊದಲನೆಯದಾಗಿ ಈ ಪ್ರಾಣಿಗಳಿಗೆ ಸಾಂಕೇತಿಕ ಮೌಲ್ಯಗಳಿರುವುದನ್ನು ನಾವು ಗಮನಿಸಬೇಕು. ಪ್ರತಿ ಪ್ರಾಣಿಯೂ, ಮನುಷ್ಯರಲ್ಲಿ ಕಂಡು ಬರುವ ಒಂದು ಗುಣ, ಒಂದು ಪ್ರವೃತ್ತಿ ಅಥವಾ ಒಂದು ಮಾನಸಿಕ ಸ್ಥಿತಿಯನ್ನು ಪ್ರತಿನಿಧಿಸುತ್ತದೆ. ಮುಂದೆ ಇದನ್ನು ಕೂಲಂಕಷವಾಗಿ ವಿವರಿಸಲಾಗುತ್ತದೆ.

ಎರಡನೆಯದಾಗಿ 'ಕಾಡಿನಕತೆಗಳು' ಪುಸ್ತಕದಲ್ಲಿ ಬರುವ, ಕಾಡಿನಲ್ಲಿ ವಾಸ ಮಾಡುವ ಪ್ರಾಣಿಗಳಿಗೆ ಯೋಚಿಸುವಶಕ್ತಿ ಇದೆ. ಹೆಚ್ಚು ಕಡಿಮೆ ಸಂಘಟಿತವಾಗಿವೆ. ಅವುಗಳಿಗೆ ಅವುಗಳದೆ ನೀತಿ, ನಿಯಮಗಳಿವೆ. ಕಾಡಿನ ಎಲ್ಲಾ ಪ್ರಾಣಿಗಳೂ ಈ ನಿಯಮಗಳಿಗೆ ಬದ್ಧವಾಗಿವೆ. ಈ ಅಂಶವು ನಮ್ಮನ್ನು 'ಸರ್ವ ಚೇತನವಾದ' (ANIMISM) ಮತ್ತು 'ಮನುಷ್ಯಾರೋಪಣಾಭಾವ' (ANTHROPOMORPHISM)ಗಳೆಡೆಗೆ ಒಯ್ಯುತ್ತದೆ. ಈ ಎರಡೂ ಭಾವನೆಗಳು ಮಕ್ಕಳು ಅಥವಾ ಆದಿಮಾನವರ ತರ್ಕಪೂರ್ವ ಅಥವಾ ಸ್ವಾಭಾವಿಕ ಯೋಚನಾ ಪ್ರಕ್ರಿಯೆಗೆ ಅನುಗುಣವಾಗಿದೆ. ಸರ್ವಚೇತನವಾದ ಅಥವಾ ಮನುಷ್ಯಾರೋಪಣಾಭಾವದ ಖಚಿತವಾದ ಅರ್ಥವೇನು ? ಸರ್ವಚೇತನಾವಾದವೆಂದರೆ, ಅಚೇತನ ವಸ್ತುಗಳಿಗೂ ಸಹ ಉದಾ : ಗುಡ್ಡಬೆಟ್ಟಗಳು, ನದಿಗಳು, ಕಲ್ಲು ಬಂಡೆಗಳು ಇತ್ಯಾದಿ, ಚೇತನವಿದೆಯೆಂದು ನಂಬುವುದು. ಈ ನಂಬಿಕೆಯಿಂದ, ಸಹಜ ರೀತಿಯಲ್ಲಿ "ಕುಲದೇವತಾಪದ್ಧತಿ"ಯು (TOTEMISM) ಉದ್ಭವಿಸುತ್ತದೆ. ಈ ಪದ್ಧತಿಯಲ್ಲಿ, ನಿರ್ಜೀವ ವಸ್ತುಗಳಿಗೆ ವಿಗ್ರಹಗಳಿಗೆ, ಜೀವ ತುಂಬಿ ಮಾನವ ಚೇತನಕ್ಕೆ (HUMANSOUL) ಸಂಬಂಧಿಸಿದ ಗುಣಗಳನ್ನು ಅನ್ವಯಿಸಲಾಗುತ್ತದೆ. ಬೊಂಬೆಯೊಡನೆ ಪುಟ್ಟಮಕ್ಕಳು ಮಾತನಾಡುವುದು ; ಬಾಲಕರು ಮೊಲಗಳನ್ನು ತಮ್ಮೊಡನೆ ಮಲಗಿಸಿಕೊಳ್ಳುವುದು, ಅದಕ್ಕೊಂದು ಹೆಸರಿಡುವುದು, ಅದರೊಡನೆ ಮಾತನಾಡುವುದು, ಇವು ಸರ್ವಚೇತನಾವಾದದ ಉದಾಹರಣೆಗಳು. ಸರ್ವ ಚೇತನವಾದ ಮತ್ತು ಕುಲದೇವತಾ ಪದ್ಧತಿಯು, ವಿವಿಧ ರೂಪಗಳನ್ನು, ಮುಂದುವರೆದ ನಾಗರೀಕ, ಸಾಮಾಜಿಕ ಬಾಂಧವ್ಯಗಳಲ್ಲಿಯೂ ಕಾಣಬಹುದು. ಸಾಕುಪ್ರಾಣಿಗಳಿಗೆ ನಿಕಟವರ್ತಿಗಳಾಗುವುದು ; ಅವುಗಳಲ್ಲಿ ಪ್ರಾಯಶಃ ಇಲ್ಲದ, ಆದರೆ ತಮಗೆ ಅನಿಸಿದ ಗುಣಗಳು ಹಾಗೂ ಪ್ರವೃತ್ತಿಗಳು ಅವುಗಳಲ್ಲಿವೆಯೆಂದು ಪ್ರತಿಪಾದಿಸುವುದು ಮತ್ತು ಹಾಗೇ ಇದೆಯೆಂದು ಸ್ಥಾಪಿಸಲು ಪ್ರಯತ್ನಿಸುವುದು ; ಒಬ್ಬ ವ್ಯಕ್ತಿಯು ತನ್ನ ನಾಯಿಯೊಡನೆ ಪ್ರೀತಿ ವಿಶ್ವಾಸ ಪೂರ್ವಕವಾಗಿ ಮಾತನಾಡುವುದರ ಮೂಲಕ, ತನ್ನ ಭಾವನೆಗಳನ್ನು ಆ ನಾಯಿಯೊಡನೆ ಹಂಚಿಕೊಂಡು, ಅದಕ್ಕೂ ಅನ್ವಯಿಸಿ, ಆ ಮೂಲಕ ಬಾಂಧವ್ಯವನ್ನು ಬೆಳೆಸಿಕೊಳ್ಳುತ್ತಾನೆ. ಇದು ಬಹಳ ಹಳೆಯಕಾಲದ ರೀತಿಯೇ ಸರಿ, ತರ್ಕಪೂರ್ವವೂ, ವಿಚಾರ ಹೀನವೂ ಆದ ಚಿಂತನಾ ರೀತಿಯು ಇದಾಗಿದೆ. ನಾವು ಬಹುತೇಕಪಾಲು ಈ ರೀತಿಯನ್ನು ನಮ್ಮ ಜೀವಮಾನ ಪರ್ಯಂತ ಉಳಿಸಿಕೊಳ್ಳುತ್ತೇವೆ. ಇದರಿಂದ ಉದ್ವೇಗ

ಭರಿತ ಹಾಗೂ ಮಾನಸಿಕ ಒತ್ತಡಕ್ಕೊಳಗಾಗಬಹುದಾದ ಅನೇಕ ಸಂದರ್ಭಗಳಲ್ಲಿ, ನಮ್ಮ ಮಾನವ ಸ್ಥೈರ್ಯವನ್ನು (HUMAN SPIRIT) ಸಮ ಸ್ಥಿತಿಯಲ್ಲಿಟ್ಟುಕೊಳ್ಳಲೂ, ಅವಶ್ಯಕತೆಗೆ ತಕ್ಕಂತೆ ಹೊಂದಿಕೊಳ್ಳಲೂ, ವಿವಿಧಮಟ್ಟದ ಶಕ್ತಿ ಸಾಮರ್ಥ್ಯಗಳನ್ನು ಪ್ರದರ್ಶಿಸಲೂ ಅನುಕೂಲವಾಗುತ್ತದೆ.

'ಸರ್ವಚೇತನವಾದ' (Animism) ದಿಂದ 'ಮನುಷ್ಯಾರೋಪಣಾಭಾವ' (Anthropomophism) ಅಥವಾ 'ಮನುಷ್ಯಾರೋಪಣತ್ವ' (Anthropomorphization) ದ ವರೆಗಿನ ಪರಿವರ್ತನೆಯು ಸುಲಭವಾದುದು. 'ಮಾನವ' ವಲ್ಲದ ಪ್ರಾಣಿವರ್ಗ ಅಥವಾ ಸಸ್ಯವರ್ಗದ ಜೀವಿಗಳಿಗೆ ಮಾನವ ಗುಣಗಳನ್ನಾರೋಪಿಸುವುದೇ 'ಮನುಷ್ಯಾರೋಪಣಾಭಾವ'ವಾಗಿದೆ. ಇದನ್ನೇ ಈ ಹಿಂದೆ ಉದಾಹರಿಸಿರುವುದು – ಒಬ್ಬ ವ್ಯಕ್ತಿಯು ತನ್ನ ನಾಯಿ, ಬೆಕ್ಕು ಅಥವಾ ಇತರ ಸಾಕು ಪ್ರಾಣಿಗಳೊಡನೆ ಮಾನಸಿಕ ಬಂಧನವನ್ನು ಹೊಂದಿರುವುದು.

ಹಾಗೆಂದು ಈ ರೀತಿಯ ವ್ಯವಹಾರ ಅಥವಾ ಸಂಚರಣೆ (Communication)ಯನ್ನು ಅಲ್ಲಗಳೆಯುವಂತೆಯೂ ಇಲ್ಲ ಅಥವಾ ಈ ಅಭೌತ ಗುಣಗಳನ್ನು (Spiritual Qualities) ಹೀಯಾಳಿಸುವಂತೆಯೂ ಇಲ್ಲ. ಇದು ಮಾನವ ಗುಣಗಳಲ್ಲೊಂದಾದುದರಿಂದ, ಆ ಬಗ್ಗೆ ಒತ್ತಿ ಹೇಳಲಾಗಿದೆ. ಮಕ್ಕಳ ಈ ರೀತಿಯ ವರ್ತನೆಯನ್ನು ವಿಶ್ಲೇಷಿಸಿದರೆ :-ತಮ್ಮ ಸುತ್ತು ಮುತ್ತಲಿನ ವಸ್ತುಗಳಿಗೆ ತಮ್ಮ ಭಾವನೆಗಳು, ಉದ್ವೇಗ, ಆವೇಗಗಳು ಹಾಗೂ ಆಲೋಚನೆ, ಅಭಿಪ್ರಾಯಗಳನ್ನು ಮೇಳವಿಸಿ, ತಮ್ಮದೇ ಆದ ಪ್ರಪಂಚವನ್ನು ಸೃಷ್ಟಿಸಿಕೊಳ್ಳುವುದನ್ನೂ ; ತಮ್ಮ ಆಂತರಿಕ ವಿಶ್ವದೊಡನೆ ಸಂಪರ್ಕವನ್ನು ಬೆಳೆಸಿಕೊಳ್ಳುವುದನ್ನೂ ಆಂತರಿಕ ವಿಶ್ವದ ಬಗ್ಗೆ ತಮ್ಮ ಅರಿವು ಮತ್ತು ತಿಳುವಳಿಕೆಗಳನ್ನು ಆ ವಸ್ತುಗಳೊಡನೆ ಸಂಭಾಷಿಸುವುದರ ಮೂಲಕ ಹೊರಗೆಡಹುವುದನ್ನೂ ಕಾಣಬಹುದು.

ಪ್ರತಿ ವ್ಯಕ್ತಿಯೂ ತನ್ನ ವಿಕಾಸಮಾರ್ಗದಲ್ಲಿ, ಉನ್ನತ ಮಟ್ಟಕ್ಕೆ ಏರಲು ಪ್ರಯತ್ನಿಸುವುದರ ಮೂಲಕ, ಮಾನವ ಚೇತನದ ಸ್ಪಂದನೆಯನ್ನು ಹೊರಗೆಡಹುತ್ತಾನೆ. ನಾವು ಈ ವಿಷಯಗಳನ್ನು ಇದ್ದದ್ದಿದ್ದ ಹಾಗೆ ಒಪ್ಪಿಕೊಳ್ಳಬೇಕು. ಮರಿಗಳ ಶಿಕ್ಷಣದಲ್ಲಿ ಈ ಸೂಕ್ಷ್ಮ ರೀತಿಯ ಪ್ರತಿಪಾದನೆಗಳನ್ನು ವಿಚಾರ ಮಾಡುವಾಗ, ನಾವೇನು ಮಾಡಲು ಹೊರಟಿದ್ದೇವೆ ಎಂಬ ಬಗ್ಗೆ ಖಚಿತವಾಗಿ ತಿಳಿದಿರಬೇಕು.

ಮುಂದೆ ತರುಣಾವಸ್ಥೆಗೆ ಬರುವ ವೇಳೆಗೆ, 'ಅಮೂರ್ತಭಾವನೆಗಳು' (Abstractions) ಮತ್ತು ಸಾಮಾನ್ಯ ಸೂತ್ರ ನಿರೂಪಣೆಗಳು' (Generalisations) ಇವುಗಳನ್ನು ಮಾಡುವ ಶಕ್ತಿಯು ಸಾಕಷ್ಟು ವಿಕಾಸ ಹೊಂದಿದ್ದು, ಯುವಕ ಯುವತಿಯರು ತಮ್ಮ ಮಾನಸಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳ ಬಗ್ಗೆ ಬೇರೆಯದೇ ಆದ ರೀತಿಯಲ್ಲಿ ವಿಚಾರ ಮಾಡಲು ಸಮರ್ಥರಾಗುತ್ತಾರೆ. ತರ್ಕ ಬದ್ಧವಾಗಿಯೂ ವಿವೇಕಯುತವಾಗಿಯೂ ಪ್ರತಿಪಾದಿಸಲು ಶಕ್ತರಾಗುತ್ತಾರೆ. ಮರಿಗಳ ವಯಸ್ಸಿನಲ್ಲಿ ಇದು ಸಾಧ್ಯವಿಲ್ಲ. ಮಗುವು ತನ್ನ ಮಾನಸಿಕ ಮೌಲ್ಯಗಳು ಮತ್ತು ಭಾವಪರವಶತೆಗಳನ್ನು ಹಾಗೂ ತನ್ನ ಆಂತರಿಕ ವಿಶ್ವವನ್ನು ರೂಢಿಸಿಕೊಳ್ಳಬೇಕಾದರೆ, ತರ್ಕಪೂರ್ವ ಅಥವಾ ಮಾತನಾಡುವ ಸ್ಥಿತಿಗೆ ಮುಂಚಿನ ರೀತಿಯಲ್ಲಿ ಯೋಚಿಸಬೇಕು. ಕವಿಯಂತೆ ತಾನು ತನ್ನ ಕಲಾತ್ಮಕ ರೂಪಗಳನ್ನು ಸೃಷ್ಟಿಸಿಕೊಳ್ಳಬೇಕು. ಸಾಂಕೇತಿಕ ವಿಶ್ವವನ್ನು ಅವಲಂಬಿಸಬೇಕು. ಮಾನಸಿಕ ಅಥವಾ ಆಧ್ಯಾತ್ಮಿಕ ಮೌಲ್ಯಗಳನ್ನು ನಿರೂಪಿಸಿ ಹೊರ ಪ್ರಪಂಚದ ಸ್ಥೂಲವಸ್ತುಗಳೊಡನೆ ಅವುಗಳಿಗೆ ಸಂಬಂಧ ಕಲ್ಪಿಸುವಾಗ. ಆ ಪ್ರತಿಪಾದನೆಗಳನ್ನು ಮತ್ತು ಪೂರ್ವೀಭಾವನೆಗಳನ್ನು ಪ್ರಾಣಿಗಳು ಮತ್ತು ವಸ್ತುಗಳಿಗೆ ಅನ್ವಯಿಸುವಾಗ. ಮಗುವು ಅವುಗಳನ್ನು ಅರಿತುಕೊಂಡು. ಮನದಟ್ಟು ಮಾಡಿಕೊಂಡು, ಅರ್ಥೈಸಿಕೊಂಡು, ತನ್ನಸುತ್ತಲಿನ ಹೊರಪ್ರಪಂಚದೊಡನೆ ಹೊಂದಿಸಿ, ತನ್ನದೇ ಆದ ಪ್ರಪಂಚವನ್ನು ಸೃಷ್ಟಿಸಿಕೊಳ್ಳುತ್ತದೆ, ಈ ವಿವರಣೆಯ ಪ್ರಾಮುಖ್ಯತೆಯನ್ನು ನಾವಿಲ್ಲಿ ಗಮನಿಸಬೇಕು. ಇದು ಮಾನವ ಚೈತನ್ಯದ (Human Psyche) ಬೆಳವಣಿಗೆಗೆ ಅತಿ ಮುಖ್ಯವಾದುದಷ್ಟೇ ಅಲ್ಲದೆ, ಈ ಸಮೀಕರಣವುಂಟಾಗದಿದ್ದರೆ ಮಾನಸಿಕ ರೋಗಗಳ ಮೂಲ ಕಾರಣಗಳಲ್ಲೊಂದಾಗುತ್ತದೆ, ಆಂತರಿಕ ಮತ್ತು ಬಾಹ್ಯ ಪ್ರಪಂಚಗಳಲ್ಲಿ

ಪರಸ್ಪರ ಸಂಬಂಧವನ್ನು ಮಾಡದಿದ್ದರೆ ವಿಕೃತ ವ್ಯಕ್ತಿತ್ವದ ಬೆಳೆವಣಿಗೆಗೆ ಅನುವು ಮಾಡಿದಂತಾಗುತ್ತದೆ. ವಾಸ್ತವಿಕಬಾಹ್ಯ ವಿಶ್ವದೊಡನೆ ಸಹಜ ರೀತಿಯ ಸಂಬಂಧಗಳನ್ನು ಹಾಳುಮಾಡಿದಂತಾಗುತ್ತದೆ. ವ್ಯಕ್ತಿಯಲ್ಲಿ ಅಶಕ್ತತೆಯುಂಟಾಗುತ್ತದೆ. ಈ ರೀತಿಯ ಮಾನಸಿಕ ಸ್ಥಿತಿಗೆ "ಸ್ಕೈಜೋಫ್ರೀನಿಯಾ" (Schizophrenia) ಎಂದು ಹೇಳುತ್ತಾರೆ

ಕಾಡಿನ ಹಿನ್ನೆಲೆಯಲ್ಲಿ ಪ್ರಾಣಿಗಳ ಪಾತ್ರಗಳ ಮೂಲಕ ಕತೆಗಳ ಮಾಲೆಯನ್ನು ಹೆಣೆದಿರುವ, ಘಟನಾತ್ಮಕವಾದ ಕಾಲ್ಪನಿಕವಾದ ಹಾಗೂ ಭ್ರಮಾತ್ಮಕವಾದ ಕತೆಗಳನ್ನು ಹೇಳುವುದರ ಪ್ರಾಮುಖ್ಯತೆಯು ಇಲ್ಲಿ ಅಡಗಿದೆ. ನಾವು ಮಗುವಿನ ವೈಯಕ್ತಿಕ, ನಿಗೂಢ ಮನಸ್ಸನ್ನು ಅವನಿಗೆ ಪರಿಚಯ ಮಾಡಬಹುದು. ಅವನಲ್ಲಿ ಅಮೂಲ್ಯವಾದ ಆಧ್ಯಾತ್ಮಿಕ ಮೌಲ್ಯಗಳ ಅರಿವನ್ನುಂಟು ಮಾಡಬಹುದು. ಅವನು ಅರ್ಥಮಾಡಿಕೊಳ್ಳುವ ಮಟ್ಟಿಗೆ ಅವುಗಳನ್ನು ಪ್ರತಿಪಾದಿಸಬಹುದು ಅವುಗಳನ್ನು ಅರಿತುಕೊಂಡು ವ್ಯವಹರಿಸುವ ಮಟ್ಟಿಗೆ ಅವನಿಗೆ ತಿಳಿಯ ಹೇಳಬಹುದು. ಈ ಎಲ್ಲಾ ಕಾರಣಗಳಿಗಾಗಿ ನಾವು ಕಾಡಿನ ಪ್ರಾಣಿಗಳಿಗೆ ಕೃತಜ್ಞರು.

ಷೇರ್‌ಖಾನ್ ಅಥವಾ ಬಾಲು ಬಗ್ಗೆ ಹೇಳುವಾಗ, ಕಾಡಿನ ಇತರ ಪ್ರಾಣಿಗಳ ಬಗ್ಗೆ ವಿವರಿಸುವಾಗ, ಸುಮ್ಮನೆ ಪ್ರಾಣಿಗಳ ಬಗ್ಗೆ ಮಾತನಾಡುತ್ತಿಲ್ಲವೆಂದೂ, ಸ್ಪಷ್ಟವಾದ, ವಾಸ್ತವಿಕ ಮಾನವ ಆದರ್ಶಗಳ ಬಗ್ಗೆ ತಿಳಿಯ ಹೇಳುತ್ತಿದ್ದೇವೆಂದೂ, ನಾವು ಮನಪೂರ್ವಕದಿಂದ ಗ್ರಹಿಸಬೇಕು. ಈ ಆದರ್ಶಗಳನ್ನು ವಿವರವಾಗಿ ಒಂದೊಂದಾಗಿ ಪರಿಶೀಲಿಸೋಣ.

(ಮುಂದುವರೆಯುವುದು)

ಬರುವ ಲೇಖನ : ಅಕೇಲ ಮತ್ತು ಮರಿಗಳ ಹಿಂಡು.

(ಪುಟ 5 ರಿಂದ ಮುಂದುವರೆದುದು)

"ಇದು ಸ್ಕೌಟ್‌ಗಳಿಗೆ ಮಾತ್ರವೇ ? ಅನ್ನಿಸಿತು.

ಕೊನೆಯಲ್ಲಿ ಸ್ಕೌಟ್‌ಗಳಿಗೆ ಸ್ಕೌಟ್ ವಂದನೆ ಮತ್ತು "ಎಡಗೈ ಹಸ್ತ ಲಾಘವ" ಕೊಟ್ಟು ಶುಭ ಕೋರಿ ಕಳುಹಿಸಿಕೊಟ್ಟರು.

ಮತ್ತೆ ಸ್ಮರಣೆಗೆ ಬಂದದ್ದು ಡಿ.ವಿ.ಜಿ. ಯವರ ಅನುಭವದ ಮಾತು

ಎದ್ದೆದ್ದು ಬೀಳುತಿಹೆ ಗುದ್ದಾಡಿ ಸೋಲುತಿಹೆ,
ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ,
ಉದ್ಧರಿಸುವೆನು ಜಗವನೆನ್ನುತಿಹ ನರನೆ
ನಿನ್ನುದ್ಧಾರ ವೆಷ್ಟಾಯ್ತೊ ? ಮಂಕುತಿಮ್ಮ ....

ಲಿಂಗವೇ ಮೆಚ್ಚಿ ಅಹುದು ಅಹುದೆನ್ನುವ ಮಾತುಗಳು, ನಿಜಲಿಂಗಪ್ಪನವರ ಮಾತುಗಳೆನ್ನಿಸಿತು. ಆ ಸವಿ ಮಾತುಗಳನ್ನು ಮೆಲುಕುಹಾಕುತ್ತಾ ಹೊರ ಬಂದ ಆ ಕ್ಷಣಗಳು ಸಾರ್ಥಕವೆನ್ನಿಸಿದುವು.

ನಮ್ಮ ನೆಚ್ಚಿನ ರಾಷ್ಟ್ರನಾಯಕರು ಭೇಟಿಯ ಸವಿ ನೆನಪಿಗಾಗಿ ದಳದ ಒಬ್ಬ ಸ್ಕೌಟಿನ ಪುಸ್ತಕದಲ್ಲಿ ಸಹಿ ಮಾಡಿ ಬರೆದ "ಸತ್ಯಕ್ಕೆ ಸಾವಿಲ್ಲ" ಎಂಬ ಮಾತು ನಿಜಕ್ಕೂ ಇಂತಹ ವ್ಯಕ್ತಿಗಳಿಗೆ ಅನ್ವಯಿಸುತ್ತದಲ್ಲವೇ ?

ಸಂದರ್ಶನ : ಶ್ರೀ ಇಟಿಗಿ ಕೊಟ್ರೇಶ್
ಸ್ಕೌಟ್ ಮಾಸ್ಟರ್ ಮತ್ತು ಸ್ಕೌಟುಗಳು

ವರದಿ : ಶ್ರೀಮತಿ ಸಿ. ಜಿ. ಶೈಲಾ
ಎಂ.ಎ., ಎಂ.ಇಡಿ., ಡಿ.ಜೆ.ಎಂ., ಸಹ-ಶಿಕ್ಷಕಿ,
ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜು

ಓರಿಸ್ಸಾದ ಖುರ್ದಾದಲ್ಲಿ ಜರುಗಿದ 13ನೇ ರಾಷ್ಟ್ರೀಯ ಜಾಂಬೂರಿಯ ಸುವರ್ಣ ಕ್ಷಣಗಳು

—ಷಕೀನಾ ಎಂ. ಸನದಿ, (ಗರ್ಲ್ ಗೈಡ್)
ವನಿತಾ ವಿದ್ಯಾಲಯ ಪ್ರೌಢ ಶಾಲೆ
ಬೆಳಗಾವಿ

1998 ರ ಜನವರಿಯಲ್ಲಿ ಓರಿಸ್ಸಾದ ಖುರ್ದಾದಲ್ಲಿ ಒಂದು ವಾರಕಾಲ ನಡೆದ ರಾಷ್ಟ್ರೀಯ ಜಂಬೂರಿಯಲ್ಲಿ ಪಾಲ್ಗೊಳ್ಳುವ ಸುವರ್ಣಾವಕಾಶ ನಮ್ಮದಾಗಿತ್ತು. ಬದುಕಿನಲ್ಲಿ ಚಿರಸ್ಮರಣೀಯವಾಗಿ ಉಳಿಯುವಂತಹ ಸಿಹಿ ನೆನಪುಗಳನ್ನೂ, ಅನುಭವದ ಬುತ್ತಿಯನ್ನೂ ಪಡೆದುಕೊಂಡು ಭಾರವಾದ ಹೃದಯಗಳಿಂದ ನಮ್ಮ ನಮ್ಮ ಊರುಗಳಿಗೆ ಸೇರಿದರೂ, ಹಕ್ಕಿ-ಪಕ್ಷಿಗಳಂತೆ ಭಾರತದ ಮೂಲೆ ಮೂಲೆಗಳಿಂದ ಹಾಗೂ ವಿದೇಶಗಳಿಂದ ಬಂದ ಮಕ್ಕಳು ಒಂದಾಗಿ ನಲಿದ ಕ್ಷಣಗಳು ಈಗಲೂ ಮನದಲ್ಲಿ ಸಂತೋಷದ ಕಾರಂಜಿಯನ್ನು ಚಿಮ್ಮಿಸುತ್ತವೆ.

ಈ ಮೂರನೇ ಸಾರ್ಕ್ ಮತ್ತು 13ನೇ ರಾಷ್ಟ್ರೀಯ ಜಂಬೂರಿಗೆ ನಮ್ಮ ಆಯ್ಕೆಯಾದ ಸುದ್ದಿಯಿಂದ ಡಿಸೆಂಬರದ ಚಳಿಯಲ್ಲಿ ನಡಗುತ್ತಿದ್ದ ನಮ್ಮ ಹೃನ್ಮನಗಳೆಲ್ಲ ರೋಮಾಂಚಿತಗೊಂಡವು. ಕಂಡರಿಯದ, ಪುಸ್ತಕಗಳಲ್ಲಿ ಓದಿದ್ದ, ಭೂ-ಪಟದಲ್ಲಿ ನೋಡಿದ್ದ ದೂರದ ಓರಿಸ್ಸಾ ರಾಜ್ಯಕ್ಕೆ ಪ್ರಯಾಣ ಮಾಡಬೇಕಾದ ಕಲ್ಪನೆಯಿಂದಲೇ ನಾವೆಲ್ಲರೂ ಹಿಗ್ಗಿನ ಬುಗ್ಗೆಗಳೇ ಆಗಿದ್ದೆವು. ಜಿಲ್ಲಾ ಗೈಡ್ ಆಯುಕ್ತರಾಗಿರುವ ಶ್ರೀಮತಿ ಮೀನಾಕ್ಷಿ ರಾಜಶೇಖರ್‌ರವರು ನಮ್ಮ ತಂಡದ ನೇತೃತ್ವವನ್ನು ವಹಿಸಿಕೊಳ್ಳುವರೆಂಬ ಸಂಗತಿ ನಮಗೆ ಇನ್ನೂ ಖುಶಿ ತಂದಿತು. ಈ ಸಂಗತಿ ನಮ್ಮ ತಂದೆ-ತಾಯಿಯರಿಗೂ ಶಿಕ್ಷಕ ವರ್ಗದವರಿಗೂ, ಸ್ನೇಹಿತರಿಗೂ ಅತ್ಯಾನಂದವನ್ನುಂಟು ಮಾಡಿತು.

ಪ್ರಯಾಣಕ್ಕೆ ಬೇಕಾದ ಸಕಲ ಸಿದ್ಧತೆಗಳನ್ನೂ ಮಾಡಿಕೊಂಡೆವು. ಶಿಕ್ಷಕ ಸಾಹಿತಿ ಶ್ರೀ ಎಂ. ಎ. ಸನದಿಯವರ ಮಾರ್ಗದರ್ಶನದಲ್ಲಿ ನಾವೆಲ್ಲರೂ ದೇಶಭಕ್ತಿಯ ಕೆಲವು ಸಮೂಹ ಗೀತೆಗಳನ್ನೂ, ನಮ್ಮ ಜಿಲ್ಲೆಯ, ರಾಜ್ಯದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿರಿಮೆ-ಗರಿಮೆಗಳನ್ನೂ ಬಿಂಬಿಸುವಂತಹ ವೀರಪುರುಷರ ಧೀರ ವಾಕ್ಯಗಳನ್ನು ಹಿಂದಿಯಲ್ಲಿ ರೂಢಿಸಿಕೊಂಡೆವು. ಡಿಸೆಂಬರ್ 31 ಕ್ಕೆ ಹುಬ್ಬಳ್ಳಿಯಿಂದ ನಾವು ಆಂಧ್ರ ಪ್ರದೇಶದ ವಿಜಯವಾಡಕ್ಕೆ ಸಾಗಬೇಕಿತ್ತು. ಸ್ವಲ್ಪ ಮಟ್ಟಿನ ತಿಂಡಿ-ತೀರ್ಥಗಳನ್ನೂ, ಬೆಚ್ಚನೆಯ ಬಟ್ಟೆಗಳನ್ನೂ, ಗೆಜೆಟ್‌ಗಳನ್ನು ತಯಾರಿಸಲು ಬೇಕಾಗುವ ಕೋಲು ಹಗ್ಗ ಇತ್ಯಾದಿಗಳನ್ನೂ ಸಿದ್ಧಪಡಿಸಿಕೊಂಡೆವು.

ನಮ್ಮ ಈ ಯಾತ್ರೆಗೆ ಖ್ಯಾತ ಉದ್ದಿಮೆದಾರರಾದ ಶ್ರೀಮಾನ್ ಸುಧಾಕರ್ ಶಾನ್‌ಭಾಗ್, ಶ್ರೀ ವಾಸುದೇವ ರಾವ್, ಹಿಂದಿ ಬಿ.ಎಡ್ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಎಂ. ಎಲ್. ದಖಣಿ ಮತ್ತು ಶ್ರೀಮಾನ್ ಸತ್ತೀಗೇನಿಯವರು ತುಂಬಾ ಸಹಕಾರ ನೀಡಿದರು. ನಮ್ಮ ಶಾಲೆಯ ಪ್ರಾಚಾರ್ಯರಾಗಿರುವ ಶ್ರೀಮತಿ ಮಾರ್ಥಾ ಹುಸೇನಪ್ಪ ನಮ್ಮ ಗೈಡ್ ಕ್ಯಾಪ್ಟನ್ ಆಗಿರುವ ಶ್ರೀಮತಿ ಎಮ್. ಇ. ಮೂಡಲಗಿಯವರು ನಮಗೆ ಸಕಲ ರೀತಿಯಲ್ಲಿ ಸಹಕಾರ ನೀಡಿ ತುಂಬು ಹೃದಯದಿಂದ ಶುಭ ಹಾರೈಸಿ ಬೀಳ್ಕೊಟ್ಟರು. ಅಲ್ಲದೆ ಜಿಲ್ಲಾಧಿಕಾರಿಯಾಗಿರುವ ಮಾನ್ಯ ಶ್ರೀ ಜ. ವಿ. ಕೊಂಗವಾಡರವರೂ ನಮಗೆಲ್ಲ ಶುಭ ಹಾರೈಸಿದರು.

ಡಿಸೆಂಬರ್ 31 ರಂದು ಬೆಳಿಗ್ಗೆ ಹುಬ್ಬಳ್ಳಿಗೆ ಹೋಗಿ ಅಲ್ಲಿಂದ ರೈಲಿನ ಮೂಲಕ ಹೊರಟೆವು. ರೈಲಿನಲ್ಲಿ ಹಾಡುತ್ತ, ಹರಟುತ್ತ, ಕೇಕೆ ಹಾಕುತ್ತ, ವಿವಿಧ ವಿಷಯಗಳ ಬಗ್ಗೆ ಚರ್ಚಿಸುತ್ತ, ನಮ್ಮ ಜೊತೆಗಿದ್ದ ಇತರ ಗೈಡ್‌ಗಳ ಪರಿಚಯ ಮಾಡಿಕೊಳ್ಳುತ್ತ, ಹೊಲ-ಗದ್ದೆಗಳು, ಗಿಡ-ಮರಗಳು, ವಿವಿಧ ಊರುಗಳನ್ನೂ, ಜನರನ್ನೂ, ವಿವಿಧ

ಸೇತುವೆಗಳನ್ನೂ ದಾಟುತ್ತ ಹೀಗೆಯೇ ಪ್ರಕೃತಿಯ ಸೊಬಗನ್ನು ಸವಿಯುತ್ತ ದಿನಾಂಕ 2 ರಂದು ಖುರ್ದಾಗೆ ತಲುಪಿದೆವು. ರೈಲ್ವೆ ಸ್ಟೇಷನ್ನಿನಿಂದ ನಾವು 8 ದಿನ ವಾಸಿಸಬೇಕಾಗಿದ್ದ ಜಾಂಬೂರಿಯ ಸ್ಥಳಕ್ಕೆ ಅತ್ಯುತ್ಸಾಹದಿಂದ ಸಾಗಿದೆವು. 'ಬರುನ್ನೈ' ಎಂದು ಕರೆಯಲ್ಪಡುವ ಆ ಸ್ಥಳದಲ್ಲಿ ಸಾವಿರಾರು ಟೆಂಟ್‌ಗಳನ್ನು ಕಂಡು ಮೈ-ಮನಗಳು ರೋಮಾಂಚಿತಗೊಂಡವು. ಅಲ್ಲಿನ ಆ ಸುಂದರ ವಾತಾವರಣ, ಆ ಪರಿಸರ, ಸಾವಿರಾರು ವಿದ್ಯುತ್ ದೀಪಗಳು, ಭವ್ಯವಾದ ವೇದಿಕೆ, ವಿಶಾಲವಾದ ಪ್ರವೇಶ ದ್ವಾರಗಳು ಇವೆಲ್ಲವನ್ನೂ ನೋಡಿ ನಾವು ಒಂದು ಕ್ಷಣ ಮೂಕ ವಿಸ್ಮಿತರಾಗಿದ್ದೆವು. ಒಂದು ರೀತಿಯಲ್ಲಿ ಭಾವಪರವಶರಾಗಿದ್ದೆವು. ಮೊದಲ ದಿನ ಕೆಲವು ಅನಾನುಕೂಲಗಳಿದ್ದರೂ ಒಂದೆರಡು ದಿನಗಳಲ್ಲಿಯೇ ಶಿಬಿರದ ಅಧಿಕಾರಿಗಳು ಎಲ್ಲವನ್ನೂ ವ್ಯವಸ್ಥೆಗೊಳಿಸಿದರು.

ದಿನಾಂಕ 4 ರಂದು ಓರಿಸ್ಸಾದ ಮಾನ್ಯ ಮುಖ್ಯಮಂತ್ರಿಯವರಾದ ಸನ್ಮಾನ್ಯ ಶ್ರೀ ಬೀಜು ಪಟ್ನಾಯಕ್‌ರವರು ಜಾಂಬೂರಿಯನ್ನು ಉದ್ಘಾಟಿಸಿದರು. ಈ ಸಂಘಟನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು ಸ್ಕೌಟ್ ಮತ್ತು ಗೈಡ್‌ಗಳಲ್ಲಿ ಸೌಹಾರ್ದ-ಸಾಂಸ್ಕೃತಿಕ ಜೀವನ ಮತ್ತು ರಾಷ್ಟ್ರೀಯ ಭಾವೈಕ್ಯತೆಯ ಬಗೆಗೆ ಹೆಚ್ಚಿನ ಅರಿವು ಮೂಡಿಸುವಲ್ಲಿ ಈ ಬಗೆಯ ಶಿಬಿರಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದರು. ವಿವಿಧ ರಾಜ್ಯಗಳ ಆಕರ್ಷಕ ಪರೇಡ್, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಉದ್ಘಾಟನಾ ಸಮಾರಂಭದ ಶೋಭೆಯನ್ನು ಹೆಚ್ಚಿಸಿದ್ದವು.

ಶಿಬಿರದಲ್ಲಿ 6 ದಿನಗಳ ಕಾಲ ನಡೆದ ವಿವಿಧ ಚಟುವಟಿಕೆಗಳಲ್ಲಿ ನಾವು ಪ್ರತಿಯೊಂದರಲ್ಲೂ ಸ್ಫೂರ್ತಿ-ಉತ್ಸಾಹದಿಂದ ಪಾಲ್ಗೊಂಡಿದ್ದೆವು. ಸಾಹಸ ಚಟುವಟಿಕೆಗಳಾದ ಚಾರಣ, Tyre Wall Crossing, Fire Ditch Crossing, Swimming, Archery, ಸೈಕ್ಲಿಂಗ್ ಇತ್ಯಾದಿಗಳಲ್ಲಿ ಪಾಲ್ಗೊಂಡೆವು. ಅಲ್ಲದೆ ಸಾಂಸ್ಕೃತಿಕ ಕಾರ್ಯಕ್ರಮಗಳಾದ ಕಾವ್ಯಗಾಯನ, ಜಾನಪದ ನೃತ್ಯಗಳಲ್ಲಿ ಪ್ರತಿಭೆಯನ್ನು ಪ್ರದರ್ಶಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದೆವು. ಕರ್ನಾಟಕದ ವೀರರ ರೂಪಕ ವೇಷ ಧರಿಸಿದ ನಾವು ಜಾಂಬೂರಿಯಲ್ಲಿ ವಿಶೇಷವಾಗಿ ಆಕರ್ಷಣೀಯ ಕೇಂದ್ರವಾದೆವು. ಟಿಪ್ಪು ಸುಲ್ತಾನನ ವೇಷದಲ್ಲಿ ಹೇಮಲತಾ ಕೊಂಗವಾಡ ಮೆರೆದರೆ, ಕಿತ್ತೂರಿನ ರಾಣಿ ಚೆನ್ನಮ್ಮಳಾಗಿ ಬಾಲಕಿ ಸಕೀನಾ ಸನದಿ ಎಲ್ಲರ ಗಮನ ಸೆಳೆದಳು. ಸೀಮಾ ಕಲಘಟಗಿ, ಸುಷ್ಮಾ ಸತ್ತಿಗೇರಿ, ಸಿ. ಸಿ. ರೂಪಶ್ರೀ, ಶೀತಲ್ ಸತ್ತಿಗೇರಿ ಮತ್ತು ಅನಿತಾ ಮಂಗೇಶ್ಕರ್ ಇವರು ಜಾನಪದ ನೃತ್ಯಗಳಲ್ಲಿ ಮಿಂಚಿದರು. ನಮಗೆಲ್ಲರಿಗೂ ಪ್ರಶಸ್ತಿ ಪತ್ರಗಳನ್ನು ನೀಡಲಾಯಿತಲ್ಲದೇ ಸಾಹಸ ಕ್ರೀಡೆಗಳಲ್ಲಿ ಪಾಲ್ಗೊಂಡು ಹೆಚ್ಚಿನ ಪ್ರತಿಭೆ ಪ್ರದರ್ಶಿಸಿದ ನಮಗೆಲ್ಲ ವಿಶೇಷವಾದ 'ಸಾಹಸ ಪದಕ'ವನ್ನು ನೀಡಿ ಗೌರವಿಸಿದ್ದು ಆನಂದಾಭಿಮಾನಗಳನ್ನು ಉಂಟುಮಾಡಿತು.

ನಮಗೆಲ್ಲರಿಗೂ ಓರಿಸ್ಸಾದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಲೂ ವ್ಯವಸ್ಥೆ ಮಾಡಲಾಗಿತ್ತು. ಅದಕ್ಕಾಗಿಯೇ ವಿಶೇಷವಾಗಿ ನೂರಾರು ಬಸ್ಸುಗಳೂ ಇದ್ದವು. ನಾವು ಧಾವುಲಿಯ ಶಾಂತಿಸ್ತೂಪ, ಭುವನೇಶ್ವರ ಮುಕ್ತೇಶ್ವರ ಮಂದಿರ, ಕೇದಾರ ಗೌರಿ ಮಂದಿರ, ಲಿಂಗರಾಜ ಮಂದಿರ, ಭಾರತದಾದ್ಯಂತ ಪ್ರಸಿದ್ಧವಾಗಿರುವ ಪುರಿಯ ಜಗನ್ನಾಥ ಮಂದಿರ, ಜಗತ್ ಪ್ರಸಿದ್ಧವಾಗಿರುವ ಕೋನಾರ್ಕ್‌ನ ಸೂರ್ಯ ದೇವಾಲಯ ಇವೆಲ್ಲವುಗಳಿಗೂ ಭೇಟಿನೀಡಿ ಸಂತೋಷಗೊಂಡೆವು. 'ದೇಗುಲಗಳ ನಗರ'ವೆಂದೇ ಪ್ರಸಿದ್ಧವಾಗಿ, ಕಲೆ, ಭಕ್ತಿ ಮತ್ತು ಆಸಕ್ತಿಗಳ ತ್ರಿವೇಣಿ ಸಂಗಮವಾಗಿರುವ ಭುವನೇಶ್ವರದ ಪವಿತ್ರ ದೇವಾಲಯಗಳ ವಾಸ್ತು-ಶಿಲ್ಪ, ಕಲೆ, ಸೌಂದರ್ಯವನ್ನು ಬಣ್ಣಿಸಲಾಗದು. ಓರಿಸ್ಸಾದ ಶಿಲ್ಪ ಕಲಾಕೃತಿಗಳನ್ನು ನೋಡಿದಾಗ ಕನ್ನಡ ನಾಡಿನ ಕಣ್ಮಣಿಗಳಾಗಿರುವ ಬೇಲೂರು-ಹಳೇಬೀಡು, ಹಂಪೆಯ ದೇಗುಲಗಳೇ ನೆನಪಿಗೆ ಬಂದವು. ಆದರೆ ಅವೆರಡರ ಶಿಲ್ಪ ಕಲೆಯಲ್ಲಿರುವ ವ್ಯತ್ಯಾಸ ಅಪಾರ. ಇವೆರಡೂ ತನ್ನದೇ ಆದ ವಿಭಿನ್ನ ಶೈಲಿಯಲ್ಲಿ ಮಹತ್ವದ್ದೆನಿಸಿವೆ. ಪುರಿಯ ಅತ್ಯಂತ ಸುಂದರವಾಗಿರುವ ಬಂಗಾಳ ಕೊಲ್ಲಿಯ ಸಮುದ್ರ ತೀರದಲ್ಲಿ ಸೂರ್ಯಾಸ್ತದ ಸೊಬಗನ್ನು ಕಂಡು ಆನಂದ ತುಂದಿಲರಾದೆವು. ಇಷ್ಟೇ ಅಲ್ಲದೆ ಸುಪ್ರಸಿದ್ಧ 'ನಂದನ್ ಕಾನನ್' ಪ್ರಾಣಿ ಸಂಗ್ರಹಾಲಯಕ್ಕೂ ಭೇಟಿ ಕೊಟ್ಟು ಪ್ರಪಂಚದ ವಿವಿಧ ಪ್ರದೇಶಗಳಿಂದ ಬಂದಿರುವ ಪ್ರಾಣಿ ಮಿತ್ರರೊಡನೆ ಕೆಲ ಕ್ಷಣಗಳನ್ನು ಕಳೆಯುವ ಸೌಭಾಗ್ಯವೂ ನಮ್ಮದಾಯಿತು. ಬಿಳಿ ಹುಲಿ, ಆಫ್ರಿಕಾದ ಕೋತಿ, ಘೇಂಡಾಮೃಗ, ಗಜರಾಜನಾದ ಆನೆ, ರಾಷ್ಟ್ರೀಯ ಪಕ್ಷಿ ನವಿಲು, ಚಾಣಾಕ್ಷ ನರಿ, ಇತ್ಯಾದಿ ಪ್ರಾಣಿಗಳು ನಮ್ಮ ಕ್ಯಾಮರಾಕ್ಕೆ

ಸುಂದರ, ಆಕರ್ಷಕವಾದ ಪೋಸನ್ನು ಕೊಡಲೂ ಮುಂದಾದವು. ಒಟ್ಟಾರೆ ಓರಿಸ್ಸಾದ ಪ್ರಸಿದ್ಧ ಸ್ಥಳಗಳೆಲ್ಲವನ್ನೂ ನಾವು ನಮ್ಮ ಕ್ಯಾಮರಾದಲ್ಲಿ ಸೆರೆಹಿಡಿದೆವು. ಆಗ ಭಾರತದ ಪ್ರಸಿದ್ಧ ಸ್ಥಳಗಳಿಗೆ ಭೇಟಿ ನೀಡುವ ಸುವರ್ಣಾವಕಾಶ ದೊರೆತ ನಾವೇ ಧನ್ಯರೆಂಬ ಭಾವನೆ ನಮ್ಮೆಲ್ಲರಲ್ಲೂ ಮೂಡಿತ್ತು.

ಈ 8 ದಿನಗಳಲ್ಲಿ ವಿವಿಧ ರಾಜ್ಯಗಳ ಅನೇಕರ ಪರಿಚಯ ಮತ್ತು ಸ್ನೇಹ ಸಂಪರ್ಕವನ್ನು ಹೊಂದುವ ಸುವರ್ಣ ಅವಕಾಶ ನಮ್ಮದಾಗಿತ್ತು. ಬೇರೆ ಬೇರೆ ರಾಜ್ಯಗಳ ನೃತ್ಯಗಳು, ಉಡುಗೆ-ತೊಡುಗೆಗಳ ಬಗೆಗೆ ಅರಿತುಕೊಂಡೆವು. ಭಾರತದ ಎಲ್ಲಾ ರಾಜ್ಯಗಳಿಂದಲೂ ಅಲ್ಲದೆ ವಿದೇಶಗಳಿಂದಲೂ ಒಟ್ಟು 30,000 ಸ್ಕೌಟ್, ಗೈಡ್‌ಗಳು ಆ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಸ್ಕೌಟ್ ಗೈಡ್‌ಗಳ ಒಂದು ಪುಟ್ಟ ಪ್ರಪಂಚವೇ ಅಲ್ಲಿ ರೂಪುಗೊಂಡಿತ್ತು. ಭಾರತದ ಸಂಸ್ಕೃತಿ, ಪರಂಪರೆಯನ್ನು ಈ ಶಿಬಿರ ಎತ್ತಿ ತೋರಿಸುತ್ತಿತ್ತು. ಜಾತಿ, ಮತ, ಭಾಷೆಯೆಂಬ ಭೇದವಿಲ್ಲದೆ ವಿಶಾಲ ಭಾರತದ ಒಂದು ಪುಟ್ಟ ಮಾದರಿಯೇ ಈ ಶಿಬಿರವೆಂಬಂತೆ ಭಾಸವಾಗುತ್ತಿತ್ತು. ಈ ಶಿಬಿರ ನಮ್ಮ ರಾಷ್ಟ್ರೀಯ ಏಕತೆಯ ಪ್ರತೀಕವೆನಿಸುತ್ತಿತ್ತು.

ದಿನಾಂಕ 9 ರಂದು ವಿವಿಧ ರಂಗು ರಂಗಿನ ಮನರಂಜನಾ ಕಾರ್ಯಕ್ರಮಗಳೊಂದಿಗೆ ಶಿಬಿರದ ಮುಕ್ತಾಯ ಸಮಾರಂಭವು ನೆರವೇರಿತು. ಈ ದಿನ ಸಮ್ಮಿಶ್ರ ಭಾವನೆಗಳಿಂದ ಕೂಡಿತ್ತು. ಕಳೆದ 8 ದಿನಗಳಿಂದ ಮನೆಯಿಂದ ದೂರ ವಿದ್ದು, ಈಗ ಕುಟುಂಬದವರನ್ನು ಸೇರುವುದು, ಸ್ನೇಹಿತರನ್ನೆಲ್ಲಾ ಕಾಣುವ ಸಂತೋಷ ಒಂದೆಡೆಯಾದರೆ, ಒಂದು ಮನೆಯೇ ಆಗಿದ್ದ ಶಿಬಿರ, ಬೇರೆ ಬೇರೆಡೆಗಳಿಂದ ಬಂದಿದ್ದ ಸ್ನೇಹಿತರನ್ನು ಬಿಟ್ಟು ಹೋಗಬೇಕೆಂಬ ಕಳವಳ ಇನ್ನೊಂದೆಡೆ ಯಾಗಿತ್ತು. ಒಟ್ಟಿನಲ್ಲಿ ಸಂತೋಷ ದುಃಖಗಳ ನಡುವೆ ಭಾವಪೂರ್ವಕವಾಗಿ ಬೀಳ್ಕೊಂಡೆವು.

ದಿನಾಂಕ 11 ರಂದು ರೈಲಿನ ಮೂಲಕ ಮತ್ತೆ ವಿಜಯವಾಡದತ್ತ ಹೊರಟೆವು. ರೈಲ್ವೆ ಸ್ಟೇಶನ್ನಿನಲ್ಲಿ ಎಲ್ಲಿ ನೋಡಿದರೂ ಸ್ಕೌಟ್ ಗೈಡ್‌ಗಳು ಒಬ್ಬರನ್ನೊಬ್ಬರು ಸುಖಕರ ಪ್ರಯಾಣಕ್ಕಾಗಿ ಹಾರೈಸುವುದು, ಪರಸ್ಪರ ಕೈ-ಕುಲುಕಿ ಮತ್ತೆ ಭೇಟಿಯಾಗೋಣ ಎನ್ನುವಂತೆ ಕಾಣುತ್ತಿದ್ದ ದೃಶ್ಯ ಮನಸೂರೆಗೊಂಡಿತು. ಅಲ್ಲದೇ ಓರಿಸ್ಸಾದ ಜನರೂ ಈ ಸ್ಕೌಟ್ ಗೈಡ್‌ಗಳನ್ನು ಅತ್ಯಂತ ಗೌರವದಿಂದ ಕಂಡು, ಅಪರಿಚಿತರಾಗಿದ್ದರೂ ಚಿರಪರಿಚಿತರಂತೆ ಕೈಬೀಸಿ ವಿದಾಯ ಹೇಳುತ್ತಿದ್ದುದು ಒಂದು ಅವಿಸ್ಮರಣೀಯ ಸನ್ನಿವೇಶವಾಗಿದ್ದಿತು. ನಾವೆಲ್ಲರೂ ಸಿಹಿನೆನಪುಗಳನ್ನು ಹೊತ್ತು ಒಲ್ಲದ, ಭಾರವಾದ ಹೃದಯದಿಂದ ಭುವನೇಶ್ವರಕ್ಕೆ ಬೀಳ್ಕೊಟ್ಟೆವು.

ದಿನಾಂಕ 12 ರಂದು ಬೆಳಿಗ್ಗೆ ವಿಜಯವಾಡಾ ತಲುಪಿದೆವು. ಅಲ್ಲಿಂದ ಹುಬ್ಬಳ್ಳಿಗೆ ರೈಲು ಸಂಜೆಯೇ ಇದ್ದುದ ರಿಂದ ಇಡೀ ದಿನ ಸ್ವಚ್ಛ, ಸುಂದರ, ಆಕರ್ಷಕವಾದ ವಿವಿಧ ಪ್ರವಾಸೀ ತಾಣಗಳ ಮೂಲಕ ಪ್ರವಾಸಿಗರನ್ನು ಆಕರ್ಷಿಸುವ ನಗರವಾದ ವಿಜಯವಾಡಾವನ್ನು ವೀಕ್ಷಿಸುವ ಸೌಭಾಗ್ಯವೂ ನಮ್ಮದಾಗಿತ್ತು. ಸಂಜೆ ವಿಜಯವಾಡಾದಿಂದ ಹೊರಟಾಗ ರೈಲು ಮುನ್ನಡೆಯುತ್ತಿದ್ದರೂ ಮನಸ್ಸು ಮಾತ್ರ ಹಿಂದೆಯೇ ಉಳಿದಿತ್ತು. ನಮ್ಮ ಮನಸ್ಸು ಶಿಬಿರದ ಅತ್ಯಂತ ಸುಂದರ, ರಮಣೀಯ ಕ್ಷಣಗಳ ಬಗೆಗೇ ಯೋಚಿಸುತ್ತಿತ್ತು. ಆದರೆ ನಮ್ಮ ಊರಿಗೆ ತಲುಪಿ ನಮ್ಮ ಸ್ನೇಹಿತರನ್ನೆಲ್ಲ ಕಂಡು ಶಿಬಿರದ ಅನುಭವ, ನಾವು ನೋಡಿದ ಪ್ರೇಕ್ಷಣೀಯ ಸ್ಥಳಗಳು ಹಾಗೂ ನಾವು ಪಾಲ್ಗೊಂಡ ಚಟುವಟಿಕೆಗಳ ಕುರಿತು ಹೆಮ್ಮೆಯಿಂದ ಹೇಳಿ ನಮ್ಮ ಸಂತೋಷವನ್ನು ಅವರೊಡನೆ ಹಂಚಿಕೊಳ್ಳಲೂ ಉತ್ಸುಕರಾಗಿದ್ದೆವು.

ದಿನಾಂಕ 13 ರಂದು ಮಧ್ಯಾಹ್ನ ಹುಬ್ಬಳ್ಳಿಯನ್ನು ತಲುಪಿದೆವು. ಅಲ್ಲಿಂದ ಬೆಳಗಾವಿಯನ್ನು ತಲುಪಲು ಸಂಜೆ ಯಾಯಿತು. ಮನೆಯಲ್ಲಿ ಸಂಕ್ರಮಣದ ಸಡಗರದ ನಡುವೆಯೇ ನಮ್ಮ ಆಗಮನ ಎಲ್ಲರಿಗೂ ಇನ್ನಷ್ಟು ಸಂಭ್ರಮ ವನ್ನುಂಟು ಮಾಡಿತ್ತು. ಮನೆಯಲ್ಲಿ ಎಲ್ಲರೂ ನಮ್ಮ ಮುಂದೆ ಪ್ರಶ್ನೆಗಳ ಮಳೆಯನ್ನೇ ಸುರಿಸಿದಾಗ, ಅವುಗಳಿಗೆ ಉತ್ತರಿಸುತ್ತಿದ್ದ ನಾವು, ನಮ್ಮ ದೇಹವು ಇಲ್ಲಿಯೇ ಇದ್ದರೂ ಮನಸ್ಸು ಮಾತ್ರ ಇನ್ನೂ ಜಾಂಬೂರಿಯಲ್ಲೇ ಸುಳಿದಾಡುತ್ತಿತ್ತು. ಶಿಬಿರದಲ್ಲಿ ಭೇಟಿಯಾಗಿದ್ದ ಸ್ನೇಹಿತರನ್ನು ನೆನೆದು, ಮತ್ತೆ ಅವರನ್ನು ಎಂದು ಕಾಣುವೆನೋ ಎಂದು ಕಳವಳಿಸುತ್ತಿತ್ತು, ಆದರೆ "ಕೂಡುವುದು ಆಕಸ್ಮಿಕ, ಅಗಲುವುದು ಅನಿವಾರ್ಯ, ನೆನಪುಗಳು ಚಿರಾಯು" ಎಂಬಂತೆ ರಾಷ್ಟ್ರೀಯ ಜಾಂಬೂರಿಯ ಸುವರ್ಣ ಕ್ಷಣಗಳು ನಮ್ಮ ಮನಸ್ಸಿನಲ್ಲಿ ಹಚ್ಚ–ಹಸುರಾಗಿಯೇ ಉಳಿದಿವೆ, ಉಳಿಯುತ್ತವೆ.

ರಾಷ್ಟ್ರೀಯ ಸಂಸ್ಥೆ ಸ್ಥಾಪಿಸಿರುವ "ಲಕ್ಷ್ಮೀ ಪ್ರಶಸ್ತಿ" ವಿವರಗಳು

(ದಿವಂಗತೆ ಶ್ರೀಮತಿ ಲಕ್ಷ್ಮೀ ಮಜುಂದಾರ್, ಮಾಜಿ ರಾಷ್ಟ್ರೀಯ ಆಯುಕ್ತೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಸಲ್ಲಿಸಿರುವ ಅನುಪಮ ಸೇವೆಯನ್ನು ಸ್ಮರಿಸುವ ಉದ್ದೇಶದಿಂದ, ದಿವಂಗತರ ಸ್ಮರಣಾರ್ಥವಾಗಿ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಲು ರಾಷ್ಟ್ರೀಯ ಕಾರ್ಯಕಾರೀ ಸಮಿತಿಯು ತೀರ್ಮಾನಿಸಿದೆ.)

ಲಕ್ಷ್ಮೀ ಪ್ರಶಸ್ತಿಯನ್ನು, ಮಾಜಿ ರಾಷ್ಟ್ರೀಯ ಆಯುಕ್ತೆ ಶ್ರೀಮತಿ ಲಕ್ಷ್ಮಿ ಮಜುಂದಾರ್‌ರವರನ್ನು ಗೌರವಿಸಲೂ ಅವರು ಸಂಸ್ಥೆಗೆ ಸಲ್ಲಿಸಿರುವ ಸೇವೆಯನ್ನು ಸ್ಮರಿಸಲೂ, ಅವರ ಜೀವನದ ಪರಮ ಗುರಿಯಾಗಿದ್ದ "ಸೇವಾ ಭಾವನೆ"ಯನ್ನು ಚಿರಕಾಲ ರೂಢಿಸಿಕೊಳ್ಳಲೂ, ಸ್ಥಾಪಿಸಲಾಗಿದೆ.)

ಪ್ರಶಸ್ತಿಗಾಗಿ ನಾಮಸೂಚಕ ಪ್ರವೇಶ ಪತ್ರಗಳಿಗೆ ಕೊನೆಯ ದಿನ : ಪ್ರತಿ ವರ್ಷ ಜುಲೈ 30

ಇದೇ ಮೊದಲ ವರ್ಷವಾದುದರಿಂದ ಮೊದಲ ಪ್ರವೇಶವು 30-7-1998 ರಂದು ಕೊನೆಗೊಳ್ಳುತ್ತದೆ.

ಹೆಗ್ಗಳಿಕೆ : ಈ ಹೆಮ್ಮೆಯ ರಾಷ್ಟ್ರೀಯ ಪ್ರಶಸ್ತಿಯು ಸ್ಕೌಟ್ ಮತ್ತು ಗೈಡ್‌ಗಳನ್ನು ಪ್ರಚೋದಿಸಿ, ಸಮಾಜ ವಿಕಾಸ ಕಾರ್ಯಕ್ರಮಗಳನ್ನು ಕೈಗೊಂಡು ಉತ್ತಮ ಸೇವೆ ಸಲ್ಲಿಸಲು ಉತ್ತೇಜನ ನೀಡುತ್ತದೆ. ಅದುವೇ ಈ ಪ್ರಶಸ್ತಿಯ ಉದ್ದೇಶ.

ಯಾವುದೇ ರೀತಿಯ ಮಾನ್ಯತೆಗಾಗಿಯಲ್ಲದೆ, ಅಸಂಕಲ್ಪಿತವಾಗಿ ಕೈಗೊಂಡು, ಅವಿಶ್ರಾಂತ ಪ್ರಯತ್ನದಿಂದ ನಡೆಸಿಕೊಂಡು ಹೋಗುವ ಸಮಾಜ ವಿಕಾಸ ಸೇವಾ ಕಾರ್ಯಕ್ಕೆ ಈ 'ಲಕ್ಷ್ಮಿ ಪ್ರಶಸ್ತಿ'ಯನ್ನು ನೀಡಲಾಗುವುದು.

ಅರ್ಹತೆ : ಬುಲ್‌ಬುಲ್ ಫ್ಲಾಕ್, ಗೈಡ್ ಕಂಪೆನಿ, ರೇಂಜರ್ ಟೀಂ, ಕಬ್ ಪ್ಯಾಕ್, ಸ್ಕೌಟ್ ಟ್ರೂಪ್, ರೋವರ್ ಕ್ರೂ ಇವುಗಳಲ್ಲಿ ಯಾವುದೇ ಒಂದು ದಳವಾಗಿರಬೇಕು.

ಪ್ರವೇಶ ಪತ್ರ ನಾಮಾಂಕನ : ರಾಜ್ಯ ಮುಖ್ಯ ಆಯುಕ್ತರ ಮೂಲಕ, ಜಿಲ್ಲಾ ಮುಖ್ಯ ಆಯುಕ್ತರು ದಳಕ್ಕೆ ತಿಳಿಯದ ಹಾಗೆ, ನಾಮ ಸೂಚಕ ಪ್ರವೇಶ ಪತ್ರವನ್ನು ರಾಷ್ಟ್ರೀಯ ಕಛೇರಿಗೆ ಕಳುಹಿಸಿಕೊಡಬೇಕು.

ಈ ಪ್ರವೇಶ ಪತ್ರವು ನಿಗದಿತ ನಮೂನೆಯಲ್ಲಿರಬೇಕು. ನಮೂನೆ ಪತ್ರದಲ್ಲಿ ಸೇವಾ ಕಾರ್ಯದ ವಿವರಣೆಗೆ ಸ್ಥಳ ಸಾಲದಿದ್ದರೆ ವಿವರಗಳನ್ನು ಮತ್ತೊಂದು ಪತ್ರದಲ್ಲಿ ವಿವರಿಸಿ ಲಗತ್ತಿಸಬಹುದು.

ಒಂದು ರಾಜ್ಯದಿಂದ ಸ್ಕೌಟ್ ವಿಭಾಗಕ್ಕೊಂದು ಮತ್ತು ಗೈಡ್ ವಿಭಾಗಕ್ಕೊಂದು ಮಾತ್ರ ನಾಮಾಂಕನವಿರಬೇಕು ಮತ್ತು ಅದು ಪ್ರತಿವರ್ಷ ಜುಲೈ 31ರೊಳಗೆ ರಾಷ್ಟ್ರ ಕಚೇರಿಯನ್ನು ತಲುಪಬೇಕು

ನ್ಯಾಯ ನಿರ್ಣಯ : ರಾಷ್ಟ್ರೀಯ ಆಯುಕ್ತರು ನೇಮಿಸುವ 5 ಜನ ನ್ಯಾಯ ನಿರ್ಣಾಯಕರ ಗುಂಪಿರುತ್ತದೆ. ಪ್ರತಿ ವರ್ಷ ಸೆಪ್ಟಂಬರಿನಲ್ಲಿ 'ವಿಜಯಿ'ಗಳ ಪಟ್ಟಿಯನ್ನು ಪ್ರಕಟಿಸಲಾಗುವುದು.

ಲಕ್ಷ್ಮಿ ಪ್ರಶಸ್ತಿ : ಲಕ್ಷ್ಮಿ ಪ್ರಶಸ್ತಿ ವಿಜೇತ ದಳಕ್ಕೆ ಪ್ರಮಾಣ ಪತ್ರವನ್ನು ನೀಡಲಾಗುವುದು. ಇದರ ಪ್ರತಿಯನ್ನು ರಾಜ್ಯ ಕಛೇರಿಯಲ್ಲಿಟ್ಟುಕೊಳ್ಳಲು ರಾಜ್ಯ ಸಂಸ್ಥೆಗೆ ನೀಡಲಾಗುವುದು. ವಿಜೇತ ದಳದ ಎಲ್ಲಾ ಸದಸ್ಯರಿಗೂ ಒಂದೊಂದು ಪದಕವನ್ನು ನೀಡಲಾಗುವುದು.

ಇದನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸದಸ್ಯತ್ವದ ಸಮಯದಲ್ಲಿ ಧರಿಸಬಹುದು. ಈ ಪ್ರಶಸ್ತಿಗೆ ನಾಮಾಂಕಗೊಳ್ಳುವ ಉಳಿದ ಪ್ರತಿ ದಳಕ್ಕೂ "ಮಾನ್ಯತಾ ಪತ್ರ"ವನ್ನು ನೀಡಲಾಗುವುದು.

DECLARATION FORM — IV

As required under Section 11 (b) of the press and registration of Book act, read with rule 8 of registration News Papers (Central Rules 56)

1. Place of Publication	:	State Headquarters Bharat Scouts and Guides Kondajji Basappa Road Prof. P. Shivashankar Circle Fort, Bangalore-560 002
2. Periodically of Publicatjon	:	Monthly—Bilingnal (Kannada, English)
3. Printers Name, Nationality Address	:	B. Basavaiah, Managing Director, Indian S.J.M. Mudrana (Pvt.) Ltd. Bangalore–560 027
4. Publishers Name, Nationality	:	M. S. Appa, Indian State Secretary Bharat Scouts and Guides Kondajji Basappa Road Prof. P. Shivashankar Circle Fort, Bangalore-560 002
5. Editors Name, Nationality Address	:	M. S. Appa, Indian (Address same as at 4 above
6. Name and address of Individuals who own the News Paper and Partner or Sharehalders holding more than 1% of Total Capital	:	The Bharat Scouts and Guides State Headquarters Kondajji Basappa Road Prof. P. Shivashankar Circle Fort, Bangalore-56 560 002

I, M. S. Appa, hereby declare that the particulars given above are true to the best of my knowledge and belief.

Sd/–
(M. S. APPA)
Publisher

GOOD TEMPER AND CHEERINESS

The knights laid great stress on being never out of temper. They thought it bad form to lose their temper and to show anger. Captain John Smith, of whom I spoke just now, was himself a type of a cheerful man. In fact, towards the end of his life two boys (and he was very fond of boys) to whom he told his adventures, wrote them down in a book: but they said that they found great difficulty in hearing all that he said beacuse he roared with laughter so much over his own descriptions of his troubles. But it is very certain that had he not been a cheery man, he never could have got through half the dangers with which he was faced at different times in his career.

Over and over again he was made prisoner by his enemies - sometimes savage enemies - but he managed always to captivate them with his pleasant manner, and become friends with them, so that often they let him go, or did not trouble to catch him when he made his escape.

If you do your work cheerfully, your work becomes much more of a pleasure to you, and also if you are cheerfull it makes other people cheerful as well, which is part of your duty as a Scout. If you make other people happy, you make yourself happy.

If you are in the habit of taking things cheerfully, you will very seldom find yourself in serious trouble. because if a difficulty or annoyance or danger seems very great, you will, if you are wise, force yourself to laugh at it, although I will allow it is very diffcult to do so at first. Still, the moment you do laugh, most of the diffculty seems to disappear at once, and you can tackle it quite easily.

Good temper can be attained by a boy who wants to have it, and it will help him in every game under the sun, and more especially in difficulty and danger, and will often keep him in a situation where a short-tempered fellow gets turned out, or leaves in a huff.

Bad language and swearing are generally used, like smoking, by boys who want try and show off how manly they are, but it only makes them look like fools. Generally, a man who swears is a man easily upset, and loses his head in a difficult situation, and he is not, therefore, to be depended upon. You want to be quite undisturbed under the greatest difficulties ; and so when you find yourself particularly anxious or excited, or angry, don't swear, force yourself to smile, and it will set you right in a moment.

Captain John Smith, who neither smoked nor swore, had a way of dealing with swearers, He devised a plan of having every man's oath noted down and at night, for every oath, he had a can of water poured down the swearer's sleeve, "with which an offender was so washed that a man would scarce hear an oath for a week.

- Extract from "Scouting for Boys."

ಚಿತ್ರದುರ್ಗದಲ್ಲಿ 14-3-1998 ರಂದು ನಡೆದ 141ನೇ ಬಿ. ಪಿ. ದಿನಾಚರಣೆ ಸಂದರ್ಭದಲ್ಲಿ
ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪನವರು, ರಾಜ್ಯ ಆಯುಕ್ತೆ (ಗೈಡ್ಸ್) ಆದ ಶ್ರೀಮತಿ ಲಲಿತಾ ಕೃಷ್ಣಸ್ವಾಮಿ,
ರಾಜ್ಯ ಕಾರ್ಯದರ್ಶಿಗಳಾದ ಪ್ರೊ॥ ಎಂ. ಸೂರ್ಯನಾರಾಯಣಪ್ಪನವರು, ಚಿತ್ರದುರ್ಗ ಬಾಲಕರ ಸರ್ಕಾರಿ ಪದವಿ-ಪೂರ್ವ ಕಾಲೇಜು
ಪ್ರಾಂಶುಪಾಲರಾದ ಶ್ರೀ ರುದ್ರಮುನಿಅವರು ಮತ್ತು ಚಿತ್ರದುರ್ಗ ಪತ್ರಕರ್ತರಾದ ಶ್ರೀ ಜಿ. ಎನ್. ಉಜ್ಜನಪ್ಪನವರು
ಇವರುಗಳು ವೇದಿಕೆಯ ಮೇಲೆ ಇರುವುದನ್ನು ಕಾಣಬಹುದು.

Those who bring sunshine to the lives of others, cannot keep happiness from themselves

-Sir J. M. Barrie

Published for the Bharat Scouts and Guides, Karnataka State Headquarters, Prof. P. Sivashankar Circle, Kondajji Basappa Road Fort, Bangalore-560 002, by the State Secretary and Printed by Sri B. Basavaiah, M.D. at S.J.M. Mudrana Pvt. Ltd. Bangalore-560 027 Phone : 2236469

Smt. Susheela B.
District Commissioner(g),
Bharat Scouts and Guides,
& Deputy Director of Public
Instruction, Bangalore South
District, Fort, Kalasipalya,
BANGALORE-560002.

THE BHARAT SCOUTS AND GUIDES
Prof. P. Sivashankar Circle
Kondajji Basappa Road
Fort, Bangalore-560 002